Employees Working in the Public Undertakings in the State

148 (156) SRI K. S. KALAMARI GOWDA (Piriyapatna).—Will the Minister for Industries be pleased to state :—

(*a*) Number of Public Undertakings in Karnataka ;

(*b*) Number of employees working in each such Public Undertakings ;

(*c*) Number of employees belonging to Karnataka State who are working in each such Public Undertaking ;

(*d*) Number of employees belonging to Tamil Nadu and Kerala working in each Public Undertaking ;

(*e*) The criteria, *i.e.*, being adopted to recruit the employees for each Public Undertaking ;

(*f*) The percentage of employees in each Public Undertaking belonging to SC/ST and Backward Classes ?

MR. SPEAKER.—The Hon'ble Minister has written to me seeking for some time to answer this question.

ಶ್ರೀ ಎನ್. ಚಿಕ್ಕೇಗೌಡ.—ಸ್ವಾಮಿ, ಈ ಪ್ರಶ್ನೆ ಎರಡನೆಯ ಸಾರಿ ಬರುತ್ತಿರುವುದು. ಕಳೆದ ಜುಲೈ ತಿಂಗಳಲ್ಲಿ ಇದನ್ನು ಕಳುಹಿಸಿದ್ದೇನೆ, ಇವೊತ್ತು 6 ನೇ ತಾರೀಖು ಬಂದಿದೆ. ಇವರಿಗೆ ಉತ್ತರ ಕೊಡಬೇಕು ಎಂದು ಇದೆಯೋ ಅಥವಾ ಈ ವಿಷಯವನ್ನು ಮುಚ್ಚಿಡಬೇಕೆಂದಿದ್ದಾರೋ ನನಗೆ ಗೊತ್ತಾಗುವುದಿಲ್ಲ. ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತೇವೆಂದು ಹೇಳಿ ಈ ರೀತಿ ಮಾಡಿದರೆ ಇದರ ಹಿನ್ನೆಲೆಯಲ್ಲಿ ಏನೋ ಇದೆ ಎಂದು ನಾನು ಸ್ಪಷ್ಟವಾಗಿ ಆಪಾದನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಇದರಲ್ಲಿ ಮುಚ್ಚಿಡತಕ್ಕಂಥದ್ದು ಎನ್ನುವುದು ಏನೂ ಇಲ್ಲ. ಮಾನ್ಯ ಸದಸ್ಯರು ಕೇಳಿರುವುದು 1978–79 ನೇ ಇಸವಿಯಿಂದ ಇದುವರೆಗೆ ಸಿಮೆಂಟ್ ಡಿಸ್ಟ್ರಿಬ್ಯೂಷನ್ ಮಾಡಿರುವ ವಿವರಗಳನ್ನು ಕೇಳಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ನಾನು ಒಂದು ತಾಲ್ಲೂಕಿನದು ಮಾತ್ರ ಕೇಳಿರುವುದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಒಂದು ತಾಲ್ಲೂಕಿನದೇ ಆದರೂ ಹಳ್ಳಿ ಹಳ್ಳಿಗೆ ಕೊಟ್ಟಿರುತ್ತಾರೆ. ಬೇರೆ ಬೇರೆ ಡೀಲರ್ಸ್‌ಗಳಿಗೆ ಕೊಟ್ಟಿರುತ್ತಾರೆ. ಅವರಿಂದ ಮಾಹಿತಿ ತರಿಸಿಕೊಂಡು ಉತ್ತರ ಕೊಡಬೇಕಾಗಿದೆ. ನಾನೂ ಸಂಬಂಧಪಟ್ಟ ವಿವರಗಳನ್ನು ಸಂಬಂಧಪಟ್ಟವರಿಗೆ ಕೇಳಿದ್ದೇನೆ. ಅದು ಬಂದ ಕೂಡಲೇ ನಾನು ಉತ್ತರ ಕೊಡುತ್ತೇನೆ. ವಿವರಗಳು ಇನ್ನೂ ಸಿಕ್ಕಿಲ್ಲ. ತರಿಸಿ ಕೊಡುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.—ಯಾವಾಗ ತರಿಸಿಕೊಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟು ಜಾಗ್ರತೆ.

ಅಧ್ಯಕ್ಷರು.—ಈಗ ಗಮನ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ.

CALLING ATTENTION TO A MATTER OF URGENT PUBLIC IMPORTANCE

ವಿಷಯ: ಅರಣ್ಯ ಕಾವಲುಗಾರರನ್ನು ತಿತಿಮತಿ ಅರಣ್ಯದಲ್ಲಿ ಕೊಲ್ಲಲಾಯಿತು ಎಂಬುದರ ಬಗ್ಗೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಅರಣ್ಯ ಕಾವಲುಗಾರರನ್ನು ತಿತಿಮತಿ ಅರಣ್ಯ ವಲಯದಲ್ಲಿ ಕೊಂದ ಬಗ್ಗೆ ನಾನು ಮಾನ್ಯ ಅರಣ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—ತಾರೀಖು 1–1–1983 ರಿಂದ, ಹುಣಸೂರು, ಕೊಳ್ಳೇಗಾಲ ಮತ್ತು ಚಾಮರಾಜನಗರ ಅರಣ್ಯ ಪ್ರದೇಶಗಳಲ್ಲಿ 15 ಗಂಡು ಆನೆಗಳನ್ನು ಕಳ್ಳ ಬೇಟೆಗಾರರು ನಾಶಪಡಿಸಿದ್ದಾರೆ. ಅರಣ್ಯ ಇಲಾಖೆಯವರು ಅತೀ ಮುತುವರ್ಜಿಯಿಟ್ಟು ದಿನಬೆಳಿಗ್ಗೆ ಅರಣ್ಯಗಳಲ್ಲಿ ಸುತ್ತಿ ಕಾವಲು ಇದ್ದರೂ ಈ ನಾಶವನ್ನು ತಡೆಯಲು ಅಸಾಧ್ಯವಾಗಿದೆ. ಈ ಪ್ರಕರಣಗಳಲ್ಲಿ ಎರಡು ಪ್ರಕರಣಗಳು ತಿತಿಮತಿ ಅರಣ್ಯಗಳಲ್ಲಿ ನಡೆಯಿತು. ತಾರೀಖು 14–7–1983 ರಲ್ಲಿ ನಡೆದ ಪ್ರಕರಣದಲ್ಲ ಎರಡು ಆನೆಗಳನ್ನು ನಾಶಪಡಿಸಲಾಯಿತು. ಎರಡನೇ ಪ್ರಕರಣವು ತಾರೀಖು 26–8–1983 ರಲ್ಲಿ ನಡೆದು, ಅದರಲ್ಲೂ ಇನ್ನೂ ಎರಡು ಆನೆಗಳ ನಾಶವಾಯಿತು. ಮೊದಲನೆಯ ಪ್ರಕರಣದ ಬಗ್ಗೆ ತನಿಖೆಯು ನಡೆಯುತ್ತಿದ್ದು, ಗುಮಾನಿಯ ಮೇಲೆ ಮೂರು ಜನರನ್ನು ಗುರುತಿಸಲಾಗಿದೆ.

ತಾರೀಖು 26–8–1983 ರಂದು ಎರಡು ಆನೆಗಳ ನಾಶದ ಬಗ್ಗೆ ಸುದ್ದಿ ಬಂದ ಕೂಡಲೇ ಅರಣ್ಯ ಇಲಾಖೆಯವರು ಅರಣ್ಯ ತಿರುಗಿ ವೀಕ್ಷಣೆ ನಡೆಸಲಾಯಿತು. ಈ ರೀತಿ ಗಸ್ತು ಮಾಡುತ್ತಿದ್ದ ಒಂದು ಗುಂಪು,

ನಾಲ್ಕು ಬಂದೂಕುದಾರರು ಮಾವಕಲ್ ಅರಣ್ಯ ಮಧ್ಯದಲ್ಲಿ ಕೊಂದ ಆನೆಗಳ ದಂತಗಳನ್ನು ಕೀಳುತ್ತಿದ್ದುದನ್ನು ನೋಡಿದರು. ಕಳ್ಳ ಬೇಟೆಗಾರರು ಬಂದೂಕುದಾರರಾಗಿದ್ದುದರಿಂದ, ಅರಣ್ಯ ಇಲಾಖೆಯವರು ಕೂಡಲೇ ಉಪ ಜಿಲ್ಲಾ ಪೋಲೀಸ್ ಅಧಿಕಾರಿ, ಮಡಿಕೇರಿಯವರನ್ನು ಸಂಪರ್ಕಿಸಿ, ತಮಗೆ ಸಹಾಯ ಬೇಕೆಂದು ಕೇಳಿಕೊಂಡರು. ಇವರ ಸಹಾಯವಲ್ಲದೆ, ಮೈಸೂರಿನ ಹಾಗೂ ಮಡಿಕೇರಿಯ ಜಿಲ್ಲಾ ಬಂದೂಕುದಾರರ ಪ್ರತ್ಯೇಕ ದಳ (District Armed Reserve) ದ ಸಹಯ ಕೋರಲಾಯಿತು. ತಾರೀಖು 26 ನೇ ರಾತ್ರಿ ಸುಮಾರು 60 ಜನರ ಪಡೆಯು ಅರಣ್ಯದಲ್ಲಿ ಗಸ್ತು ತಿರುಗಿ ಕಳ್ಳಬೇಟೆಗಾರರು ನುಸುಳಿ ಹೋಗುವಂತಹ ದಾರಿಗಳನ್ನು ಅಡ್ಡಗಟ್ಟಲಾಯಿತು. ಆ ರಾತ್ರಿ ಕಳ್ಳ ಬೇಟೆಗಾರರನ್ನು ಹಿಡಿಯಲು ಸಿಕ್ಕದ್ದರಿಂದ, ತಾರೀಖು 27 ನೇ ಬೆಳಿಗ್ಗೆ ಇಲಾಖೆಯವರುಗಳು ಸಣ್ಣ ಸಣ್ಣ ಗುಂಪುಗಳಾಗಿ ಅದೇ ಅರಣ್ಯವನ್ನು ಗಸ್ತು ತಿರುಗಲಾಯಿತು. ಹತ್ತು ಸಿಬ್ಬಂದಿಗಳಿದ್ದ ಒಂದು ಗುಂಪು ಆ ಕಳ್ಳ ಬೇಟೆಗಾರರನ್ನು ಅರಣ್ಯದಲ್ಲಿ ಸಂಧಿಸಿದರು. ಕೂಡಲೇ ಆ ಕಳ್ಳ ಬೇಟೆಗಾರರು ತಮ್ಮ ಅತ್ಯಾಧುನಿಕ ಬಂದೂಕುಗಳಿಂದ ಗುಂಡುಗಳನ್ನು ಹಾರಿಸಲಾಗಿ, ಅರಣ್ಯ ಇಲಾಖೆಯ ಕಾಮಲುಗಾರರಲ್ಲಿ ಒಬ್ಬರು ಸ್ಥಳದಲ್ಲೇ ಮೃತಪಟ್ಟರು. ಸಿಬ್ಬಂದಿಗಳೊಡನಿದ್ದ ಅರಣ್ಯ ಪಾಲಕರು 4–5 ಗುಂಡುಗಳನ್ನು ಹಾರಿಸಿದಾಗ, ಕಳ್ಳ ಬೇಟೆಗಾರರು ಹೆದರಿ ಪರಾರಿಯಾದರು.

ಈ ಪ್ರಕರಣ ನಡೆದ ಮಾವಕಲ್ ಕಾದಿಟ್ಟ ಅರಣ್ಯ ಪ್ರದೇಶವು ಸುಮಾರು 30,000 ಎಕರೆಯಷ್ಟು ವಿಸ್ತೀರ್ಣವಿದ್ದು, ಬಹಳ ದಟ್ಟವಾದ ಅರಣ್ಯಗಳಿಂದ ಕೂಡಿದೆ. ಇಲ್ಲಿ ವನ್ಯ ಜೀವಿಗಳೂ ಸಹ ಅಧಿಕ. ಈ ರೀತಿ ವಿಸ್ತಾರವಾದ ಪ್ರದೇಶಕ್ಕೆ ಬರೇ 3 ಅರಣ್ಯ ಪಾಲಕರು ಹಾಗೂ 6 ಅರಣ್ಯ ರಕ್ಷಕರು ಇದ್ದಾರೆ. ಆದರೂ, ಇತ್ತೀಚೆಗೆ ಆನೆಗಳ ಕಳ್ಳ ಬೇಟೆಯನ್ನು ನಿಲ್ಲಿಸಲು, ಅರಣ್ಯ ರಕ್ಷಕರಿಗೆ ಸಹಾಯ ನೀಡಲು ದಿನಕೂಲಿಯ ಮೇಲೆ ಆಳುಗಳನ್ನು ನೇಮಿಸಿ, ಅರಣ್ಯಗಳ ಗಸ್ತು ತಿರುಗಲು ಏರ್ಪಾಡ ಮಾಡಲಾಗಿದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಅರಣ್ಯ ಸಚಿವರು ಕೊಟ್ಟಂತಹ ಹೇಳಿಕೆಯನ್ನು ನಾವು ಕೇಳಿದ್ದೇವೆ. ನಮ್ಮ ಅರಣ್ಯ ಸಚಿವರ ಪ್ರಕಾರ ತಾರೀಖು 1–9–1983 ರಂದು 15 ಗಂಡು ಆನೆಗಳನ್ನು ಕಳ್ಳ ಬೇಟೆಗಾರರು ಬೇಟೆಯಾಡಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. 19 ಗಂಡು ಆನೆಗಳು ಸತ್ತಿವೆ ಎಂದು ನಮಗೆ ಸಿಕ್ಕಿದಂಥ ವರ್ತಮಾನ ಹಾಗೂ ಅದು ಪತ್ರಿಕೆಗಳಲ್ಲಿ ಬಂದಿದೆ. ಇನ್ನು ಸೆಪ್ಟಂಬರ್ 1 ನೇ ತಾರೀಖಿನಂದು ಈ ಕೆ. ಎಸ್. ಆರ್. ಪಿ. ಸಿ. ಪಕ್ಕದಲ್ಲಿ 50 ವರ್ಷ ಪ್ರಾಯದ ಆನೆಯನ್ನು ಆ ಕಳ್ಳ ಬೇಟೆಗಾರರು ಕೊಂದಿದ್ದಾರೆ. ಗುಂಡಿನ ಶಬ್ದ ಕೇಳಿದರೂ ಕೆ. ಎಸ್. ಆರ್. ಪಿ. ಸಿ.ಯವರು ಈ ಹಿಂದೆ ಒಬ್ಬನನ್ನು ಕೊಂದ ಕಾರಣ ಅವರಿಗೆ ಅಲ್ಲಿಗೆ ಹೋಗತಕ್ಕಂತಹ ಧೈರ್ಯ ಬರಲಿಲ್ಲ ಎಂಬ ವರ್ತಮಾನ ಬಂದಿದೆ. ಇನ್ನು ಈ ವಾಚರ್ ಸತ್ತಂತಹ ವಿಚಾರದಲ್ಲಿ ಸಾರ್ವತ್ರಿಕವಾಗಿ ಅನುಮಾನ ಬಂದಿದೆ. ಈ ವಾಚರ್‌ಗಳಿಗೆ ಇದುವರೆಗೂ ಯೂನಿ ಫಾರಂ ಕೊಟ್ಟಿಲ್ಲ. ಸಾಧಾರಣ ಉಡುಗೆಯಲ್ಲಿ ಅವರು ಹೋಗುತ್ತಿದ್ದಾರೆ. ದಯಮಾಡಿ ಅಧಿಕಾರಿಗಳು ವರದಿ ಕೊಟ್ಟ ಕೂಡಲೇ ತಾವು ಸ್ವೀಕಾರ ಮಾಡಬೇಕಾಗಿಲ್ಲ ಮತ್ತು ನಾವು ಸ್ವೀಕಾರ ಮಾಡಬೇಕಾಗಿಲ್ಲ. ತಮ್ಮ ಪ್ರಯತ್ನದ ಬಗ್ಗೆ ಅನುಮಾನ ಅಲ್ಲ, ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿರಬಹುದು. ಹಾಗೆಂದು ಅಧಿಕಾರಿಗಳು ಕೊಟ್ಟ ವರದಿಯನ್ನೇ ಇಲ್ಲಿ ಕೊಡಲಿಕ್ಕೆ ಪ್ರಯತ್ನ ಮಾಡಬೇಡಿ. ಇದನ್ನು ದಯಮಾಡಿ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಪ್ರತಿಷ್ಠೆಯ ವಿಚಾರವಾಗಿ ಇದನ್ನು ಇಟ್ಟುಕೊಳ್ಳಬಾರದು. ಅಧ್ಯಕ್ಷರೇ, ಮತ್ತೊಂದು ವಿಚಾರವೆಂದರೆ, ಹಿಂದೆ ಬಂಡಿಪುರ, ಕನಕಪುರ, ಸಾತನೂರು, ಕೊಳ್ಳೇಗಾಲ ಈ ಪ್ರದೇಶಗಳಲ್ಲಿ ಆನೆಗಳನ್ನು ಹೊಡೆಯುತ್ತಿದ್ದರು. ಸಾಧಾರಣವಾಗಿ ಪೋಚರ್ಸ್ ಮಡಿಕೇರಿಯ ಅರಣ್ಯದಲ್ಲಿ ಬರುತ್ತಿರುವುದು ಬಹಳ ಕಡಿಮೆ. ಆದರೆ ಅಲ್ಲಿ ಬರುವ ಪ್ರಯತ್ನ ಈಗ ಆಗಿದೆ. ಇದು ಏಕೆ ಆಯಿತು ? ಇಷ್ಟೆಲ್ಲಾ ಆಗಲಿಕ್ಕೆ ಏನು ಕಾರಣ ? ಸರಿಯಾದಂತಹ ವರದಿಯನ್ನು ಕೂಡ ತಾವು ಕೊಟ್ಟಿಲ್ಲ. ಈ ಕಾರ್ಕಾಸ್‌ನ್ನು ಒಳಗಿಂದೊಳಗೇ ಬರ್ನ್ ಮಾಡಿದ್ದಾರೆ. ಇಲ್ಲಿ ಸಂದೇಹ ಏಕೆ ಬಂದಿದೆ ಎಂದರೆ ಈ ಪ್ರಾಣಿಯ ಸ್ಕೆಲಿಟನ್ ಸಿಗದಹಾಗೆ ಬರ್ನ್ ಮಾಡಿಬಿಟ್ಟರೆ ದಾಖಲೆ ಸಿಗುವುದಿಲ್ಲ. ಕಾರ್ಕಾಸ್ ಇಲ್ಲದೇ ಸುಟ್ಟುಬಿಟ್ಟಿದ್ದಾರೆ. ಅರಣ್ಯ ಅಧಿಕಾರಿಗಳ ಕೈವಾಡ ಇಲ್ಲಿ ಇದೆಯೆಂಬುದಕ್ಕೆ ಇದು ಒಂದು ದಾಖಲೆಯಾಗುತ್ತದೆ. ಬರ್ನ್ ಮಾಡಿದರೆ ಎಲುಬಾದರೂ ಸಿಗಲೇಬೇಕು. ಆನೆಯನ್ನು ಎತ್ತಿಕೊಂಡು ಹೋಗಿ ಗೂಢವಾದ ಪ್ರದೇಶದಲ್ಲಿ ಸುಡಲು ಸಾಧ್ಯವಾಗುವುದಿಲ್ಲ. ಸುಡಬೇಕಾದರೆ ಅರಣ್ಯ ಪ್ರದೇಶದಲ್ಲಿ ಸುಡಬೇಕು. ಸುಡುವಾಗ ಕೂಡ ಇದನ್ನು ಇಲಾಖೆಯವರು ಕಂಡುಹಿಡಿಯಲಿಕ್ಕೆ ಆಗಲಿಲ್ಲವೆಂದರೆ, ಒಂದು ಅವರು ಇದರಲ್ಲಿ ಶಾಮೀಲಾಗಿರಬೇಕು, ಇಲ್ಲವಾದರೆ ಹೆದರಿಕೊಂಡು ಓಡಿಹೋಗಿರಬೇಕು. ಇಂತಹ ಹೇಡಿಗಳನ್ನು ಈ ಪ್ರದೇಶದಲ್ಲಿ ಏಕೆ ಇಟ್ಟಿದ್ದೀರಿ ? ಎಂಬುದು ನಮ್ಮ ಪ್ರಶ್ನೆ. ಇನ್ನೊಂದು ಪ್ರಶ್ನೆ ಎಂದರೆ ಒಂದೊಂದು ಆನೆ ದಂತವೂ 20–30 ಕೆ.ಜಿ.ತೂಗುತ್ತದೆ. ಗವರ್ನಮೆಂಟ್ ರೇಟ್ ಪ್ರಕಾರ ಒಂದು ಕೆ.ಜಿ.ಗೆ ಒಂದೂವರೆ ಸಾವಿರ ರೂಪಾಯಿ ಆಗುತ್ತದೆ. ಆದರೆ ಸ್ಮಗಲ್ ರೇಟ್ ಕೆ.ಜಿ.ಗೆ ಐನೂರು ರೂಪಾಯಿಗೆ ಸಿಗುತ್ತದೆ. ಕದ್ದು ಮಾರುವವರು ದಂತವನ್ನು ಹೇಗೆ ಸಾಗಿಸುತ್ತಾರೆ ಎಂಬುದಕ್ಕೆ ಕ್ಲಾರಿಫಿಕೇಷನ್ ಬೇಕು. ಅವರು ಅವುಗಳನ್ನು ಎಲ್ಲಿಂದ ತರುತ್ತಾರೆ ? ಅದನ್ನು ಹಿಡಿಯುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ? ಕೆ.ಜಿ. ಒಂದಕ್ಕೆ ಒಂದು–ಒಂದೂವರೆ ಸಾವಿರ ರೂಪಾಯಿ ಸರ್ಕಾರದ ಬೆಲೆ ಇರುವಾಗ ಬ್ಲಾಕ್ ಮಾರ್ಕೆಟ್‌ನಲ್ಲಿ ಐದುನೂರು ರೂಪಾಯಿಗೆ ಸಿಗುವಾಗ ಅಲ್ಲೇ ಕೊಂಡು

ಕೊಳ್ಳಲು ಬರುತ್ತಾರೆ. ಇದರ ವಿಚಾರ ಏನು ಮಾಡಿದ್ದೀರಿ ? ಆನೆಯನ್ನು ಹೊಡೆಯತಕ್ಕಂಥ ಪೋಚರ್‌ನ್ನು ಬಿಟ್ಟು ಇವರು ಏನು ಮಾಡುತ್ತಿದ್ದಾರೆ. ಎಂದರೆ, ಇಲ್ಲಿ ರಾಜಕೀಯವನ್ನು ಬೆರೆಸುತ್ತಿದ್ದಾರೆ. ಶ್ರೀ ಕರುಂಬಯ್ಯ ಎನ್ನುವವರು ದೊಡ್ಡ ಪ್ಲಾಂಟರ್, ತಾಲ್ಲೂಕು ಬೋರ್ಡು ಅಧ್ಯಕ್ಷರಾಗಿದ್ದಂತಹವರು. ಇಂತಹ ಗೌರವಸ್ಥರ ಮನೆಗೆ ಸರ್ಚ್‌ವಾರಂಟ್ ತೆಗೆದುಕೊಂಡು ಹೋಗಿ ಶೋಧಿಸುವ ಪ್ರಯತ್ನವನ್ನು ಇವರು ಮಾಡಿದ್ದಾರೆ. ಇದರಲ್ಲಿ ರಾಜಕೀಯವಲ್ಲದೆ ಇನ್ನೇನು ? ಇದನ್ನು ರಾಜಕೀಯಕ್ಕೆ ಬಳಸಿಕೊಂಡು ಗೌರವಸ್ಥರ ಮನೆ ಶೋಧಿಸಿದಾಗ ಏನೂ ಸಿಕ್ಕಿಲ್ಲ. ಇವತ್ತು ಕಾಂಗ್ರೆಸ್ ನಾಯಕರು ಯಾರು ಇದ್ದಾರೆ, ಅವರ ಮನೆಗಳನ್ನು ಶೋಧಿಸುವ ನೆಪದಲ್ಲಿ ರಾಜಕೀಯವನ್ನು ಬಳಸುತ್ತಿದ್ದಾರೆ. ನಿಮ್ಮ ಜನ್ಮಜನ್ಮದಲ್ಲೂ ಪೋಚರ್‌ನ್ನು ಹಿಡಿಯುವ ತಾಕತ್ತು ನಿಮಗೆ ಬರುವುದಿಲ್ಲ ಎಂದು ನಾನು ಹೇಳುತ್ತೇನೆ. ಇದೊಂದು ಗಂಭೀರವಾದ ವಿಚಾರವಾಗಿದೆ. ವಾಚರ್‌ನನ್ನು ಕೊಂದುಬಿಟ್ಟಿದ್ದಾರೆ. ಅರಣ್ಯ ಕಾವಲುಗಾರು ಹೆದರಿಬಿಟ್ಟಿದ್ದಾರೆ. ಅವರು 303 ನಮೂನೆಯ ಆಯುಧವನ್ನು ಉಪಯೋಗ ಮಾಡುತ್ತಿದ್ದಾರೆ. ಆಧುನಿಕ ವೈರ್‌ಲೆಸ್ ಸಲಕರಣೆಗಳನ್ನು ಉಪಯೋಗ ಮಾಡುತ್ತಿದ್ದಾರೆ. ಕೇರಳದಿಂದ ಬಂದವರು ಸಾಕಷ್ಟು ಅರಣ್ಯಗಳಲ್ಲಿ ಇದ್ದಾರೆಂದು ಮಾಹಿತಿ ಬಂದ ಸಂದರ್ಭದಲ್ಲೂ ಕೂಡ ಅನಾವಶ್ಯಕವಾಗಿ ಕಾಂಗ್ರೆಸ್ ಕಾರ್ಯಕರ್ತರನ್ನ, ಗೌರವಸ್ಥರ ಮನೆಯನ್ನು ಈ ರೀತಿ ಸರ್ಚ್ ವಾರಂಟ್ ತಂದು ಧಾಳಿ ಮಾಡಲಿಕ್ಕೆ ಹೊರಟಿದ್ದೀರಿ. ಆದರೆ ನೀವು ನಿಜವಾಗಿಯೂ ಪೋಚರ್‌ನ್ನು ಹಿಡಿಯುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆಯಲ್ಲಿ ಹೀಗೆ ಉದ್ದುದ್ದವಾಗಿ ಮಾತನಾಡಲು ಅವಕಾಶ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿದ್ದೇವೆ. ನಿಯಮ ಪ್ರಕಾರ ಹೆಚ್ಚಿನ ವಿವರಗಳನ್ನು ಪಡೆಯಲು ಏಕೆ ಅವಕಾಶವಿಲ್ಲ ?

ಅಧ್ಯಕ್ಷರು.—ಇದರ ಮೇಲೆ 334 ರಲ್ಲಿ ಬೇಕಾದರೆ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಅನೇಕ ವಿವರಗಳನ್ನು ಪಡೆದುಕೊಂಡಿದ್ದೇವೆ. ಕೊನೆಯಪಕ್ಷ ಇದನ್ನು ಅರ್ಧ ಗಂಟೆ ಚರ್ಚೆಯಾಗಿ ಪರಿವರ್ತಿಸಿದರೆ ಚರ್ಚೆ ಮಾಡಲು ಅನುಕೂಲವಾಗುತ್ತದೆ.

ಅಧ್ಯಕ್ಷರು.—ಬಂಗಾರಪ್ಪನವರೇ, ತಾವು ಈಗಾಗಲೇ ಹದಿನೈದು ನಿಮಿಷ ತೆಗೆದುಕೊಂಡಿದ್ದೀರಿ. ಬೇಗ ಮಾತು ಮುಗಿಸಿದರೆ ಇನ್ನು ನಾಲ್ಕು ಜನರಿಗೆ ಮಾತನಾಡಲಿಕ್ಕೆ ಅವಕಾಶ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಬೇರೆ ವಿವರಗಳನ್ನು ನಾನು ಹೊಂದಿದ್ದೇನೆ. ಗಮನ ಸೆಳೆಯುವ ಸೂಚನೆಗೆ ಇಷ್ಟು ಕಾಲ ಸಾಕಾಗಲಾರದು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಕೊನೆಯಬಾಗಿ ನಾನು ಹೇಳುವುದೇನೆಂದರೆ ಕಳ್ಳ ಸಾಗಾಣಿಕೆ ದಾರರನ್ನು ಹಿಡಿಯಲಿಕ್ಕೆ ಪ್ರಾಮಾಣಿಕ ಪ್ರಯತ್ನ ಇವರು ಮಾಡುತ್ತಿಲ್ಲ. ಮಾನ್ಯ ಅರಣ್ಯ ಸಚಿವರಿಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ತಮ್ಮ ಹಿಂಬಾಲಕರು...

ಅಧ್ಯಕ್ಷರು.—ಈಗ ನಾನು ನಿಮಗೆ ಎಚ್ಚರಿಕೆ ಕೊಡಬೇಕಾಗಿದೆ. ಹದಿನೈದು ನಿಮಿಷ ಆಯಿತು.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಮ್ಮ ಹಿಂಬಾಲಕರನ್ನು ದುರುಪಯೋಗ ಪಡಿಸಿಕೊಂಡು ರಕ್ಷಣೆ ಕೊಟ್ಟು ಸರಿಯಾದ ತಪ್ಪಿತಸ್ಥರನ್ನು ಹಿಡಿಯುವುದಕ್ಕೆ ಆಗದ ಹಾಗೆ ಪ್ರಯತ್ನ ನಡೆಸುತ್ತಿದ್ದೀರಿ ಎಂದು ನಾನು ಸರ್ಕಾರದ ಮೇಲೆ ಆಪಾದನೆಯನ್ನು ಮಾಡುತ್ತಿದ್ದೇನೆ. ಇನ್ನೊಂದು ಮುಖ್ಯ ವಿಷಯವೆಂದರೆ ಅಧ್ಯಕ್ಷರೇ, ಕಳೆದ ಏಳು ತಿಂಗಳಲ್ಲಿ ನಡೆದ ವಿದ್ಯಮಾನಗಳನ್ನು ನೋಡಿದರೆ ಗಂಡಾನೆಗಳ ಸಂತತಿ ನಾಶವಾಗಬಹುದು ಎನ್ನುವ ಅಭಿಪ್ರಾಯ ಜನರಲ್ಲಿ ಸಾರ್ವತ್ರಿಕವಾಗಿ ಮೂಡಿಬಂದಿದೆ. ನಿಮ್ಮ ಅಡಳಿತ ಯಂತ್ರಕ್ಕೆ ಏನಾಗಿದೆ ಎಂದು ನಾನು ಇವತ್ತು ಕೇಳುತ್ತಿದ್ದೇನೆ. ಇದು ದಿನದಿಂದ ದಿನಕ್ಕೆ ಹೀಗೆಯೇ ನಡೆಯುತ್ತಿದೆ. ಪೋಚರ್‌ಗಳನ್ನು ಹಿಡಿಯುವುದಕ್ಕೆ ಆಗುತ್ತಿಲ್ಲ. ಈ ದಿಸೆಯಲ್ಲಿ ನಿಮ್ಮ ಆಡಳಿತ ಯಂತ್ರ ಸಂಪೂರ್ಣವಾಗಿ ಶಿಥಿಲವಾಗಿದೆ. ಶಿಥಿಲವಾದ ಆಡಳಿತ ಯಂತ್ರವನ್ನು ಉಪಯೋಗ ಮಾಡುತ್ತಿದ್ದೀರಿ. ಆದ್ದರಿಂದ ಇದರ ಬಗ್ಗೆ ಕೊಟ್ಟಂತಹ ವಿವರಗಳು ಸ್ವಲ್ಪ ಕೂಡ ಸಮರ್ಪಕವಾಗಿಲ್ಲ. ಅಧಿಕಾರಿಗಳು ಬರೆದು ಕೊಟ್ಟ ಬರೀ ಉತ್ತರವನ್ನು ಇಲ್ಲಿ ಕೊಟ್ಟು ಬಿಡುತ್ತಾರೆ. ಆಡಳಿತಲ ಯಂತ್ರವನ್ನು ಚುರುಕು ಮಾಡುವ ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರದವರು ಮಾಡುತ್ತಾರೆಯೇ ಎಂಬುದನ್ನು ದಯಮಾಡಿ ಮಾನ್ಯ ಅರಣ್ಯ ಸಚಿವರು ಹೇಳಬೇಕು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಕಾಡು ಮಂತ್ರಿಗಳು ಕೊಟ್ಟಿರತಕ್ಕಂತಹ ಉತ್ತರ ಸತ್ಯಕ್ಕೆ ದೂರವಾದುದು ಎಂಬುದಾಗಿ ಸ್ಪಷ್ಟವಾಗಿ ಹೇಳಬೇಕಾಗಿದೆ. ಉತ್ತರವನ್ನು ಸಭೆಯ ಮುಂದೆ ಇಡುವ ಕಾಲದಲ್ಲಿ ಮತ್ತೊಂದು ದಿನಾಂಕ 3–9–1983 ರ "ಮುಂಜಾನೆ" ಪತ್ರಿಕೆಯಲ್ಲಿ ಸುದ್ದಿ ಬಂದಿದೆ. ಅದು ಏನೆಂದರೆ :

> "ತಿತಿಮತಿ ಮಾಸಲು ಅರಣ್ಯದಲ್ಲಿ ಮತ್ತೊಂದು ಆನೆಯ ಕಳೇಬರ ಪತ್ತೆ ಆಗಿದ್ದು ಇದರಿಂದ ಕಳೆದ ಆರು ದಿನಗಳಲ್ಲಿ ಮೂರು ಆನೆಗಳ ಹತ್ಯೆ ನಡೆದಂತೆ ಆಗಿದೆ.
>
> ಆಗಸ್ಟ್ 31 ರಂದು ಮೂರನೇ ಆನೆ ಹತ್ಯೆ ದೃಶ್ಯ ಪಿರಿಯಾಪಟ್ಟಣ ಪೋಲೀಸ್ ವ್ಯಾಪ್ತಿಗೆ ಸೇರಿದ ಕೋಡಿಗನ ಗದ್ದೆ ಬಳಿ ಕುಚೇಲಹಳ್ಳಿಯಲ್ಲಿ ಈ ಸಲಗನನ್ನು ಕೊಂದು ಅಪಹರಿಸಿದ ದಂತದ ಅಂದಾಜು ಮೌಲ್ಯ 75,000 ರೂಪಾಯಿಗಳು ಆಗಿದ್ದು ಆಪಾದಿತರು ತಲೆಮರೆಸಿಕೊಂಡಿರುತ್ತಾರೆ.

ಆಗಸ್ಟ್ 31 ರಂದು ರಾತ್ರಿ ಸುಮಾರು 9–30 ಗಂಟೆ ಒಳಗೆ ಮೂಲೇನ ಅರಣ್ಯ ಪ್ರದೇಶದಿಂದ ಬಂದ ಗುಂಡಿನ ಶಬ್ದವನ್ನು ಕೇಳಿದ ಕೆ.ಎಸ್.ಆರ್.ಪಿ.ಸಿ. ತಂಡದ ಅರಣ್ಯ ಎಸ್. ಸಿ. ಲಕ್ಷ್ಮಣ ಮತ್ತು ಹುಣಸೂರು ಡಿ.ಎಫ್.ಓ. ಕೆ.ಟಿ. ಗಣಪತಿ ಇವರುಗಳು ತಮ್ಮ ಸಿಬ್ಬಂದಿಗಳೊಡನೆ ಗುಂಡಿನ ಶಬ್ದ ಬಂದ ಸ್ಥಳಕ್ಕೆ ಹೋಗಿ ನೋಡಿದಾಗ ಈ ಆನೆಯ ಕಳೇಬರವನ್ನು ಕಂಡರು."

ಅಧ್ಯಕ್ಷರು.—ನೀವು ಪತ್ರಿಕೆಯಲ್ಲಿ ಬಂದಿರುವ ಸುದ್ದಿಯನ್ನೇ ಸಭೆಯಲ್ಲಿ ಹೇಳುತ್ತಾ ಹೋದರೆ ಹೇಗೆ ?

ಶ್ರೀ ಎನ್. ಚಿಕ್ಕೇಗೌಡ.—ಇರತಕ್ಕಂತಹ ವಿಚಾರವನ್ನು ಹೇಳುತ್ತಿದ್ದೇನೆ.

"ಈ ಪ್ರಕರಣದಲ್ಲಿ ದೊಡ್ಡ ಜಾಲವೇ ಅಡಗಿದೆ ಎಂದು ಈ ಮೂರನೆಯ ಹತ್ಯೆಯಿಂದ ಹೇಳಬಹುದಾಗಿದೆ."

"ಹಿಂದೆ ತಿತಿಮತಿಯ ದೇವಮುಚಿ ಅರಣ್ಯದಲ್ಲಿ ಎರಡು ಆನೆ ಮತ್ತು ಓರ್ವ ಅರಣ್ಯ ಕಾವಲುಗಾರನನ್ನು ಕೊಲೆ ಮಾಡಿದ ಸ್ಥಳದಿಂದ 1 ಕಿ.ಮಿ. ದೂರದಲ್ಲಿ ನಿನ್ನೆ ವಿದೇಶಿ ವೈರ್‌ಲೆಸ್ ಯಂತ್ರ ಮತ್ತು ವಿದೇಶಿ ಬ್ಯಾಟರಿ ಪೋಲೀಸರಿಗೆ ದೊರೆತಿದೆ". ಎಂಬುದಾಗಿ ಪತ್ರಿಕೆಯಲ್ಲಿ ವರದಿಯಾಗಿದೆ.

ಹಿಂದೆ ಇದೇ ರೀತಿ 27–28 ಆನೆಗಳನ್ನು ಕೊಲೆ ಮಾಡಿರಬಹುದು. ನಮಗೆ ಸರಿಯಾದ ಮಾಹಿತಿ ಇಲ್ಲ. ಇವರು ಹೇಳಿರುವ ಪ್ರಕಾರ ಹುಣಸೂರು, ಕೊಡಗು, ಮೈಸೂರು ಎಲ್ಲಾ ಸೇರಿಸಿಬಿಟ್ಟಿದ್ದಾರೆ. ನಮಗೆ ಬಂದಿರತಕ್ಕಂತಹ ಮಾಹಿತಿ ಪ್ರಕಾರ ಹೇಳುವುದಾದರೆ, 15–20 ಆನೆಗಳನ್ನು ಕೊಡಗು ಜಿಲ್ಲೆ ಹಾಗೂ ಅದರ ಬಾರ್ಡರ್ ನಲ್ಲಿರತಕ್ಕಂತಹ ಅರಣ್ಯದಲ್ಲಿ ಕೊಂದಿದ್ದಾರೆ. ಮತ್ತೆ ಆ ಹತ್ಯ ನಡೆದಂತಹ ಸಂದರ್ಭದಲ್ಲಿ ಮಂತ್ರಿಗಳು ಆ ಕ್ಷೇತ್ರದಲ್ಲೇ ಇದ್ದರು. ಇವರು ಸ್ಥಳಕ್ಕೆ ಭೇಟಿ ಕೊಟ್ಟು ಸಶಸ್ತ್ರ ಪೋಲೀಸ್ ಪಡೆಯನ್ನು ಸ್ಥಳಕ್ಕೆ ತೆಗೆದುಕೊಂಡು ಹೋಗಿ ಆ ಸ್ಥಳದ ಸುತ್ತಲೂ ಕಾವಲು ಹಾಕಿ, ಇನ್ನೇನು ಹಿಡಿಯುತ್ತಾರೇನೋ ಎಂಬ ನಂಬಿಕೆ ನಮಗೆ ಬಂದಿತ್ತು. ಆದರೆ ಅವರು ಇವರ ಕಣ್ಣಿಗೆ ಕಾಣದೆ ಎಲ್ಲೋ ಆಕಾಶದಲ್ಲಿ ಹೆಲಿಕಾಪ್ಟರ್‌ನಲ್ಲಿ ಹೋಗಿರಬೇಕೆಂದು ಕಾಣುತ್ತದೆ. ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ನಮ್ಮ ಈಗಿನ ಅರಣ್ಯ ಮಂತ್ರಿಗಳಾಗಿರುವಂತಹ ಶ್ರೀಮಾನ್ ಜೀವಿಜಯರವರ ಕೆಲವು ಆಪ್ತರು ಚುನಾವಣೆಯಲ್ಲಿ ಇವರಿಗೆ ಸಹಾಯ ಮಾಡಿದಂತಹವರೇ ಈ ಹತ್ಯೆಯಲ್ಲಿ ತೊಡಗಿದ್ದಾರಿಂಬುದು ನಮಗೆ ಬಂದಿರುವ ಮಾಹಿತಿ ಪ್ರಕಾರ ಹೇಳಬೇಕಾಗಿದೆ.

ಮತ್ತೆ 'ಶಕ್ತಿ' ಪತ್ರಿಕೆಯಲ್ಲಿ ಮತ್ತೊಂದು ಸುದ್ದಿ ಬಂದಿದೆ. ಅದನ್ನು ನಾನು ಹೇಳುವುದಕ್ಕೆ ತಾವು ಅವಕಾಶವನ್ನೇ ಕೊಡುವುದಿಲ್ಲವಲ್ಲ. ಆ ಪತ್ರಿಕೆಯಲ್ಲಿ ಮಂತ್ರಿಗಳು ಏನು ಹೇಳಿದ್ದಾರೆಂಬುದು ಇದೆ.

ಅಧ್ಯಕ್ಷರು.—ಆ ರೀತಿ ಪತ್ರಿಕೆಯಲ್ಲಿರುವುದನ್ನೇ ಸದನದಲ್ಲಿ ಹೇಳುವುದಕ್ಕೆ ಅವಕಾಶ ಇಲ್ಲ, ವಿವರಣೆ ಕೇಳಿ ತಾವು.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ, ತಾವೂ ಕೂಡ ಕಾಡು ಪ್ರದೇಶದಿಂದ ಬಂದಿರತಕ್ಕಂತಹವರು. ಅಲ್ಲಿ ಆನೆಗಳು ಇಲ್ಲದಿರಬಹುದು. ನಾನು ಏನು ಹೇಳುತ್ತೇನೆಂಬುದನ್ನು ದಯಮಾಡಿ ಸಾವಧಾನದಿಂದ ಕೇಳಿ. ಆ ಪತ್ರಿಕೆಯಲ್ಲಿ ಏನು ಬಂದಿದೆ ಎಂದರೆ :

"ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಮಾನ್ಯ ಜೀವಿಜಯರಿಗೆ ಸಕಲ ರೀತಿಯಲ್ಲೂ ಸಹಕರಿಸಿದ ಕೊಡಗಿನ ಮೈದು ಎಂಬುವರಿಗೆ ಸಚಿವರು ಚೀಮಾರಿ ಹಾಕಿದ್ದಾರೆ"

"ನೀನು ಚುನಾವಣೆಯ ಸಂದರ್ಭದಲ್ಲಿ ನೀಡಿದ್ದ ಹಣವನ್ನೆಲ್ಲಾ ಈಗಲೇ ಕೊಟ್ಟುಬಿಡುತ್ತೇನೆ. ನನ್ನ ಹೆಸರು ಹಾಳುಮಾಡಬೇಡಿ, ಈಗಲೇ ಮರಗಳನ್ನು ಕಡಿಯುವುದನ್ನು ನಿಲ್ಲಿಸು" ಎನ್ನುವ ಎಚ್ಚರಿಕೆಯನ್ನು ನೀಡಿದ್ದಾರೆ.

ಇದಕ್ಕೆಲ್ಲಾ ಹಿನ್ನೆಲೆ ಏನು ಎಂದರೆ ಈ ಮಂತ್ರಿಗಳು ಅರಣ್ಯ ಖಾತೆಯನ್ನು ವಹಿಸಿಕೊಂಡ ಮೇಲೆ ಕೊಡಗಿನಲ್ಲಿ ಬಹಳಷ್ಟು ಆನೆಗಳನ್ನು ಕೊಂದಿದ್ದಾರೆ. ಸುಮಾರು 50–60 ಆನೆಗಳ ಹತ್ಯೆಯಾಗಿದೆ. ಅರಣ್ಯ ರಕ್ಷಕರೊಬ್ಬರು ಸತ್ತಿದ್ದಾರೆಂಬ ವರದಿ ಇದೆ. ಆದರೆ ನಮಗೆ ಬಂದಿರುವ ಮಾಹಿತಿ ಪ್ರಕಾರ 3 ಜನ ಸತ್ತಿದ್ದಾರೆ. ವಿರೋಧ ಪಕ್ಷದ ನಾಯಕರು ಈ ಬಗ್ಗೆ ವಿವರಗಳನ್ನು ಹೇಳಿದ್ದಾರೆ. ಇವೆಲ್ಲಾ ವಿಚಾರಗಳನ್ನೂ ಸವಿಸ್ತಾರವಾಗಿ ಪ್ರಸ್ತಾಪ ಮಾಡಬೇಕಾಗಿದೆ. ಆದ್ದರಿಂದ ಬರೀ ಗಮನ ಸೆಳೆಯುವ ಸೂಚನೆಯಲ್ಲಿ ವಿವರಣೆಯನ್ನು ಕೇಳುವುದಕ್ಕೆ ಆಗುವುದಿಲ್ಲ. ಇದರ ಹಿಂದೆ ಬಹಳ ಕೈವಾಡ ಇದೆ.

ಅಧ್ಯಕ್ಷರು.—ಅರಣ್ಯ ಇಲಾಖೆಯ ಬೇಡಿಕೆ ಬಂದಾಗ ಈ ಎಲ್ಲಾ ವಿಷಯಗಳನ್ನೂ ಹೇಳಿ.

ಶ್ರೀ ಎನ್. ಚಿಕ್ಕೇಗೌಡ.—ಅರಣ್ಯ ಇಲಾಖೆಯ ಬೇಡಿಕೆ ಬಂದಾಗ ಹೇಳುವುದು ಬೇರೆ ಇದೆ. ಇದು ಅತ್ಯಂತ ಗಹನವಾದ ವಿಚಾರ. ಈ ಮಂತ್ರಿಗಳು ಕೊಡಗಿನಲ್ಲಿ ನಡೆಯತಕ್ಕಂತಹ ಆನೆಗಳ ಹತ್ಯೆಯನ್ನು ತಡೆಗಟ್ಟುವುದಕ್ಕೆ ಬದಲು, ಎಲ್ಲಾ ಕ್ಷೇತ್ರಗಳಲ್ಲೂ ತಿರುಗಾಡುವುದಕ್ಕೆ ಹೊರಟಿದ್ದಾರೆ. ರಾಜಕೀಯ ಮಾಡುವುದಕ್ಕೆ ಹೊರಟಿದ್ದಾರೆ. ಪೊನ್ನೆ ನನ್ನ ಕ್ಷೇತ್ರಕ್ಕೂ ಬಂದಿದ್ದರು. ಇವತ್ತು ಕಾಡಿನಲ್ಲಿರುವ ಆನೆಗಳ ಹತ್ಯೆ ಹಾಗೂ ಕಾಡಿನ ಸಂಹಾರ ಇವರ ಹಿಂಬಾಲಕರು ಯಾರು ಇದ್ದಾರೆ ಅವರಿಂದ ನಡೆಯುತ್ತಿದೆ. ಇವರು ರಾಜಕೀಯ ಮಾಡುತ್ತಿದ್ದಾರೆ.

ಶ್ರೀ ಜಿ. ಎ. ಜೇವಿಜಯ.—ವಿಷಯ ಎಷ್ಟು ಇದೆ ಅಷ್ಟನ್ನೂ ಮಾತ್ರ ಹೇಳಿ. ರಾಜಕೀಯ ಎಂದು ಹೇಳಬೇಡಿ. ನಿಮ್ಮದೂ ನನಗೆ ಗೊತ್ತಿದೆ.

ಅಧ್ಯಕ್ಷರು.—ವಿವರಣೆಯನ್ನು ಕೇಳಿ, ಮಂತ್ರಿಗಳ ಮೇಲೆ ಆಪಾದನೆ ಮಾಡಬೇಡಿ.

ಶ್ರೀ ಎನ್. ಚಿಕ್ಕೇಗೌಡ.—ಮಂತ್ರಿಗಳ ಮೇಲೆ ಆಪಾದನೆ ಮಾಡಬೇಕಾಗಿದೆ.

ಅಧ್ಯಕ್ಷರು.—ಹಾಗಾದರೆ ತಾವು ನೋಟೀಸ್ ಕೊಡಿ.

ಶ್ರೀ ಎನ್. ಚಿಕ್ಕೇಗೌಡ.—ನೋಟೀಸನ್ನು ಕೊಡುತ್ತೇನೆ. ಇದರ ಹಿನ್ನೆಲೆಯನ್ನು ಹೇಳಲೇಬೇಕು. ಇದರ ಹಿನ್ನೆಲೆಯನ್ನು ನಾನು ಹೇಳುವುದಕ್ಕೆ ಆಗದಿದ್ದರೆ ನಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ತಾವು ಮೊದಲು ನೋಟೀಸ್ ಕೊಡಿ.

ಶ್ರೀ ಎನ್. ಚಿಕ್ಕೇಗೌಡ.—ತಾವು ದಯಮಾಡಿ ನಮ್ಮ ರಕ್ಷಣೆಗೆ ಬನ್ನಿ. ತಾವೂ ಕೂಡ ಒಂದು ಕಾಲದಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂತಹವರು. ಆದ್ದರಿಂದ ದಯಮಾಡಿ ನಮ್ಮ ರಕ್ಷಣೆಗೆ ಬನ್ನಿ.

ಅಧ್ಯಕ್ಷರು.—ಹಾಗೆಂದ ಮಾತ್ರಕ್ಕೆ ಇರತಕ್ಕಂತಹ ಕಾನೂನನ್ನು ಉಲ್ಲಂಘನೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನಾನು ಸದನದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದೇನೆ. ಈ ಕಾಡು ಮಂತ್ರಿಗಳು ರಾಜಕೀಯ ಮಾಡಿಕೊಂಡು, ಕಾಡಿನಲ್ಲಿರುವ ಪ್ರಾಣಿಗಳು, ಮರಗಳನ್ನು ಕಡಿಯುವುದಕ್ಕೆ ತಮ್ಮ ಹಿಂಬಾಲಕರನ್ನು ಬಿಟ್ಟಿದ್ದಾರೆ.

(ಗೊಂದಲ)

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಮಾನ್ಯ ಸದಸ್ಯರು ಮಂತ್ರಿಗಳ ಮೇಲೆ ನೇರವಾದ ಆಪಾದನೆ ಮಾಡುತ್ತಿದ್ದಾರೆ. ಆಪಾದನೆ ಮಾಡುವುದಕ್ಕೆ ಈ ಸದನದಲ್ಲಿ ಅವರಿಗೆ ಅವಕಾಶ ಇದೆ. ಆಪಾದನೆ ಮಾಡಬೇಕಾದರೆ ನಿಯಮಗಳು ಇವೆ. ಅವರ ಹಿಂಬಾಲಕರು ಯಾರ್ಯಾರು ಈ ಕಾಡನ್ನು ಮತ್ತು ಕಾಡಿನ ಪ್ರಾಣಿಗಳನ್ನು ಲೂಟಿ ಮಾಡತಕ್ಕಂತಹವರು, ಹಣವನ್ನು ಮಾಡತಕ್ಕಂತಹವರು ಇವರ ಶಾಮೀಲಿನಿಂದ ಇವತ್ತು ಆ ಕೆಲಸ ನಡೆಯುತ್ತಿದೆ, ಅವರ ಪತ್ತಿರ ಇದನ್ನು ಸಾಬೀತು ಮಾಡುವುದಕ್ಕೆ ಸಾಕ್ಷ್ಯಾಧಾರಗಳು ಇದ್ದರೆ ತಮಗೆ ಬರೆದು ನಿಯಮಗಳ ಪ್ರಕಾರ ತಾವು ಅದಕ್ಕೆ ಅವಕಾಶ ಕೊಡಬೇಕು. ಮಂತ್ರಿಗಳ ಮೇಲೆ ಆಪಾದನೆ ಮಾಡಿದ ಮೇಲೆ ಈ ಸದನದಲ್ಲಿ ಆ ಆಪಾದನೆಗೆ ಉತ್ತರ ಕೊಡುವುದಕ್ಕೆ ಮಂತ್ರಿಗಳಿಗೆ ಅಧಿಕಾರ ಇದೆ. ಅವರಿಗೂ ಅವಕಾಶ ಕೊಟ್ಟು ಒಂದು ಸಮಯವನ್ನು ನಿಗದಿ ಮಾಡಬೇಕಾಗುತ್ತದೆ. ನಂತರ ಅವರು ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಯಾವುದೋ ಪತ್ರಿಕೆಯಲ್ಲಿ ಬರೆದಿದ್ದಾರೆಂದು ಅದನ್ನು ಇಲ್ಲಿ ತೆಗೆದುಕೊಂಡು ಓದುತ್ತಾ ಹೋದರೆ ಹೇಗೆ? ಪತ್ರಿಕೆಗಳಲ್ಲಿ ಬರೆಯುತ್ತಾರೆ, ಎಲ್ಲರ ಮೇಲೂ ಬರೆಯುತ್ತಾರೆ. ನಿಮ್ಮ ಮೇಲೂ ಬರೆಯುತ್ತಾರೆ. ನಮ್ಮ ಮೇಲೂ ಬರೆಯುತ್ತಾರೆ. ಏಕೆ, ನಿಮ್ಮ ಮೇಲೆ ಬರೆಯುವುದಿಲ್ಲ ಎಂದು ನಿಮಗೆ ನಂಬಿಕೆಯೇ? ಆದ್ದರಿಂದ ಇದಕ್ಕೆ ಏಡೆ ಮಾಡಿಕೊಡುವುದಾದರೆ, ಇದಕ್ಕೆ ಕೊನೆ ಮೊದಲು ಇರುವುದಿಲ್ಲ. ಆದ್ದರಿಂದ ತಾವು ಇದರ ಬಗ್ಗೆ ಮಾರ್ಗದರ್ಶನ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ತಾವು ಹೇಳುವುದಕ್ಕಿಂತ ಮುಂಚೆಯೇ ಹೇಳಿದ್ದೇನೆ ಆಪಾದನೆ ಮಾಡುವ ಹಾಗೆ ಇದ್ದರೆ, ತಾವು ನೋಟೀಸ್ ಕೊಡಿ ಎಂದು.

ಶ್ರೀ ಹೆಚ್. ಡಿ. ದೇವೇಗೌಡ.—ಆ ರೀತಿಯ ಸೂಚನೆಯನ್ನು ಕೊಟ್ಟ ಮೇಲೂ ಅದನ್ನು ಉಲ್ಲಂಘನೆ ಮಾಡಿ ಹೋಗುವುದಾದರೆ, ತಾವು ಅದಕ್ಕೆ ಅವಕಾಶ ಕೊಡಬಾರದು.

ಶ್ರೀ ಮಾಣಿಕ್‌ರಾವ್ ಪಾಟೀಲ್.—ಮಾನ್ಯ ದೇವೇಗೌಡರು, ಈ ಸದನದಲ್ಲಿ ಈ ಕಡೆ ಕುಳಿತು ಕೆಲಸ ಮಾಡುವಂತಹ ಅನೇಕ ಸಂದರ್ಭಗಳಲ್ಲಿ ನಮ್ಮಗಳ ಮೇಲೆ ಆಪಾದನೆಗಳನ್ನು ಮಾಡಿದ್ದಾರೆ. ಅವರು ಆ ರೀತಿ ಆಪಾದನೆ ಮಾಡುವಾಗ ಎಂದೂ ನೋಟೀಸ್ ಕೊಟ್ಟಿಲ್ಲ. ಆದ್ದರಿಂದ ಈ ರೀತಿಯ ಆಪಾದನೆಗಳನ್ನು ಹೊಸದಾಗಿ ಏನೂ ಮಾಡುತ್ತಿಲ್ಲ, ಅನೇಕ ಸಂದರ್ಭಗಳಲ್ಲಿ ಅವರೂ ಕೂಡ ಮಾಡಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ಈ ಸದನದ ಕಾರ್ಯಕಲಾಪದ 311ರ ನಿಯಮದ ಪ್ರಕಾರ ಪ್ರತ್ಯೇಕವಾದ ಒಂದು ನೋಟೀಸ್ ಕೊಡುತ್ತೇನೆ. ನಾನು ಏನು ಮಂತ್ರಿಗಳ ಮೇಲೆ ಆಪಾದನೆಯನ್ನು ಮಾಡಿದ್ದೇನೆ ಅದನ್ನು ವಾಪಸ್ಸು ತೆಗೆದುಕೊಳ್ಳುವುದಿಲ್ಲ. ಆಪಾದನೆಯನ್ನು ಅಷ್ಟೊಂದು ಲಘುವಾಗಿ ನಾನು ಮಾಡಿಲ್ಲ. ನನ್ನಲ್ಲಿ ಸಾಕಷ್ಟು ಸಾಕ್ಷ್ಯಾಧಾರಗಳು ಇವೆ. ಪತ್ರಿಕೆಯಲ್ಲಿ ಬಂದಿರತಕ್ಕಂತಹ ವರದಿಯನ್ನು ನಾವು ಆಧಾರವಾಗಿಟ್ಟುಕೊಳ್ಳದೇ ಇನ್ಯಾವುದನ್ನು ಆಧಾರವಾಗಿಟ್ಟುಕೊಳ್ಳಬೇಕು? ಇಲ್ಲ, ನಮಗೆ ಸರ್ಕಾರದ ಫೈಲುಗಳನ್ನು ತಂದು ನಮ್ಮ ಮುಂದೆ ಇಡುತ್ತಾರೆಯೇ? ಸತ್ಯಕ್ಕೆ ದೂರವಾದ ವರದಿಯನ್ನ ಅವರು ಸದನಕ್ಕೆ ನೀಡಿದ್ದಾರೆ. ಇದನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಶ್ರೀಮಾನ್ ದೇವೇಗೌಡರೂ ಕೂಡ ಹಿಂದೆ ಈ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂತಹವರು. ಅದನ್ನು ಅವರು ಮರೆಯಬಾರದು. ಪತ್ರಿಕೆಯಲ್ಲಿ ಬಂದಂತಹ ವರದಿಯ ಆಧಾರದ ಮೇಲೆ ಜೊತೆಗೆ ಅವರಿಗೆ ಬಂದಂತಹ ಮಾಹಿತಿಯನ್ನೂ ಆಧಾರವಾಗಿಟ್ಟುಕೊಂಡು ಆಪಾದನೆ ಮಾಡಬೇಕಾಗುತ್ತದೆ. ಅವರು ತುಂಬಾ ಹಿರಿಯ ಸದಸ್ಯರು

ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದಂತಹವರು. ವಿಧಿ ನಿಯಮಗಳು ಇವೆ, ಅದರಂತೆ ನಡೆಯ ಬೇಕೆನ್ನುವುದನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು.—ವಿಧಿ ನಿಯಮಗಳನ್ನು ಒಪ್ಪುವುದರ ಜೊತೆಗೆ ನೀವು ಮಂತ್ರಿಗಳ ಮೇಲೆ ಆಪಾದನೆ ಮಾಡುವುದಾದರೆ, ನನಗೆ ಮೊದಲು ನೋಟೀಸ್ ಕೊಟ್ಟು ನಂತರ ನಾನು ಅವಕಾಶ ಕೊಟ್ಟ ಮೇಲೆ ಆಪಾದನೆ ಮಾಡಿ.

ಶ್ರೀ ಎನ್. ಚಿಕ್ಕೇಗೌಡ.—ಇಂತಹ ವಿಚಾರ ಬಂದಾಗ ಸಂಬಂಧಪಟ್ಟ ಮಂತ್ರಿಗಳು ಇದಕ್ಕೆ ಜವಾಬ್ದಾರರಾಗುತ್ತಾರೆ. ನಾವು ಅಧಿಕಾರಿಗಳ ಮೇಲೆ ಆಪಾದನೆ ಮಾಡುವುದಕ್ಕಾಗುವುದಿಲ್ಲ. ಈ ಸದನಕ್ಕೆ ಅಧಿಕಾರಿಗಳು ಜವಾಬ್ದಾರರಲ್ಲ. ಏಕೆಂದರೆ ಅವರು ಇಲ್ಲಿಗೆ ಬಂದು ಉತ್ತರ ಹೇಳುವುದಕ್ಕಾಗುವುದಿಲ್ಲ. ಮಂತ್ರಿಗಳು ಸರ್ಕಾರದ ಮೇಲೆ ಆಪಾದನೆ ಮಾಡಬೇಕಾಗುತ್ತದೆ. ಅಧಿಕಾರಿಗಳ ಮೇಲೆ /ಆಪಾದನೆ ಮಾಡುವುದಕ್ಕೆ ಈ ಸದನದಲ್ಲಿ ಅವಕಾಶ ಇಲ್ಲ. ಆದ್ದರಿಂದ ಈ ಎಲ್ಲಾ ವಿಚಾರಗಳನ್ನೂ ಹೇಳಬೇಕಾದರೆ ಸಾಕಷ್ಟು ಕಾಲಾವಕಾಶ ಬೇಕಾಗುತ್ತದೆ. ಆದ್ದರಿಂದ ಇದನ್ನು ಅರ್ಧ ಗಂಟೆ ಚರ್ಚೆಯಾಗಿ ಪರಿವರ್ತಿಸಿ ಚರ್ಚೆ -ವಯಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನೂ ಬೇಕಾದಷ್ಟು ವಿಚಾರಗಳನ್ನು ಆಗ ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಹೇಳಬೇಕಾದರೆ ಅರ್ಧ ಗಂಟೆ ಅಲ್ಲ 3 ಗಂಟೆ ಕಾಲ ಬೇಕಾದರೂ ಚರ್ಚೆ ಮಾಡಲಿ, ಬೇಡ ಎನ್ನುವುದಿಲ್ಲ. ಅವರು ಬೇಕಾದರೆ ಅವಿಶ್ವಾಸ ನಿರ್ಣಯ ತೆಗೆದುಕೊಂಡು ಬಂದು ಚರ್ಚೆ ಮಾಡಲಿ. ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಈ ರೀತಿ ವರಾಡಿದ್ದೇನೆ ಎಂದು ಹೇಳಿದರು. ನಾನು 1972 ರಿಂದ 1977 ರವರೆಗೂ ವಿರೋಧ ಪಕ್ಷದಲ್ಲಿದ್ದಾಗ ಏನೇನು ಮಾಡಿದ್ದೇನೆ ಎನ್ನುವ ಬಗ್ಗೆ, ಅವರು ಏನು ಆಪಾದನೆ ಮಾಡಿದ್ದಾರೆ, ಅವೆಲ್ಲದರ ಬಗ್ಗೆ ನಿಯಮಾವಳಿ ಪ್ರಕಾರ ಮಾಡಿದ್ದೇನೆಯೇ ವಿನಹ ನಿಯಮಾವಳಿಯನ್ನು ಉಲ್ಲಂಘನೆ ಮಾಡಿ ಮಾಡಿಲ್ಲ. ಅದು ಈ ಸಭೆಯ ರಿಕಾರ್ಡ್‌ನಲ್ಲಿದೆ, ನೋಡಲಿ. ಆದುದ ರಿಂದ ನಾನು ಮಾನ್ಯ ಅಧ್ಯಕ್ಷರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನೇರವಾಗಿ ಸರ್ಕಾರದ ಮೇಲೆ ಏನಾದರೂ ಅವರು ಆಪಾದನೆ ಮಾಡಿದರೆ ಅಥವಾ ಮಂತ್ರಿಗಳ ಮೇಲೆ ಏನಾದರೂ ಆರೋಪ ಮಾಡ ಬೇಕಾದರೆ ನಿಯಮಾವಳಿಗಳ ಪ್ರಕಾರ ಅವಿಶ್ವಾಸ ನಿರ್ಣಯ ಏನು ಇದೆಯೋ ಅದನ್ನು ತಂದು ಮಾಡಲಿ.

(ಸಭೆಯಲ್ಲಿ ಗೊಂದಲ)

ಅಧ್ಯಕ್ಷರು.—ಅವರು ಹೇಳುವುದಕ್ಕೆ ಉತ್ತರ ಕೊಡಿ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಬಗ್ಗೆ ಏನು ನಿಯಮಾವಳಿಗಳು ಇವೆ ಎನ್ನುವುದು ಅವರಿಗೂ ತಮಗೂ ಗೊತ್ತು. ಯಾರ್ಯಾರು ಎಷ್ಟೆಷ್ಟು ಲೂಟಿ ಹೊಡೆದಿದ್ದಾರೆ, ಯಾರು ಎಷ್ಟು ಕಾಡು ಹಾನಿ ಮಾಡಿದ್ದಾರೆ, ಅವರೆಷ್ಟು ಹಿಂದೆ ಕಾಡು ಹಾನಿ ಮಾಡಿದ್ದಾರೆ ಅವೆಲ್ಲವೂ ಗೊತ್ತಿದೆ. ನೇರವಾಗಿ ಏನಾದರೂ ಆಪಾದನೆ ಮಾಡಬೇಕಾದರೆ ನಿಯಮಾವಳಿ ಪ್ರಕಾರ ಮಾಡಲಿ.

(ಸಭೆಯಲ್ಲಿ ಗೊಂದಲ)

ಶ್ರೀ ಮೈಕೇಲ್ ಫರ್ನಾಂಡಿಸ್.—ಸ್ವಾಮಿ, ಅವರು ಹಿಂದಿನಿಂದ ಏನು ಮಾಡಿಕೊಂಡು ಬಂದಿದ್ದಾರೆನ್ನುವುದು ಗೊತ್ತಿದೆ. ನಾವು ಬಂದು 8 ತಿಂಗಳಾಯಿತು ಅಷ್ಟೆ. ನಾವು 8 ತಿಂಗಳಲ್ಲಿ ಏನೂ ಕಲಿತುಕೊಂಡು ಬಂದಿಲ್ಲ. ಆದುದರಿಂದ ಮಾನ್ಯ ಚಿಕ್ಕೇಗೌಡರು ಹೇಳಿದ್ದು ಸತ್ಯಕ್ಕೆ ದೂರವಾದ ಮಾತು ಎಂದು ನಾನು ಹೇಳುತ್ತೇನೆ. ಅವರು 35 ವರ್ಷದಿಂದಲೂ ಅಧಿಕಾರದಲ್ಲಿದ್ದು ಏನು ಮಾಡಿಕೊಂಡು ಬಂದಿದ್ದಾರೆ ಎನ್ನುವುದು ಗೊತ್ತು. ಬರೀ ಕರ್ನಾಟಕದಲ್ಲಿ ಅಲ್ಲ, ಇಡೀ ಭಾರತದಲ್ಲೇ ಇರತಕ್ಕಂಥ ಎಲ್ಲಾ ಪತ್ರಿಕೆಗಳ ವಿಷಯಗಳನ್ನೂ ಅವರು ಮೊದಲಿನಿಂದಲೂ ಒಪ್ಪಿಕೊಂಡು ಬಂದಿದ್ದಾರೆ. ಆದರಂತೆ ನೀವೂ ಒಪ್ಪಿಕೊಳ್ಳಿ ಎಂದರೆ ನಾವು ಆ ಪತ್ರಿಕೆಗಳವರು ಬರೆದಿರತಕ್ಕಂಥ ವಿಷಯಗಳನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಫರ್ನಾಂಡಿಸ್‌ರವರು ಇಡೀ ಭಾರತದ ವಿಚಾರ ಹೇಳಿದ್ದಾರೆ. ಆ ವಿಚಾರದಲ್ಲಿ ನಾವೂ ಹೇಳಬೇಕು ಎಂದರೆ ನಿಮ್ಮದೂ ಸಹ ಟನ್‌ಗಟ್ಟಲೆ ಅಷ್ಟು ಇದೆ, ಯಾರೂ ಕಡಿಮೆ ಏನೂ ಇಲ್ಲ.

ಅಧ್ಯಕ್ಷರು.—ತಾವು ಸಭೆಯ ಮುಂದೆ ಇರತಕ್ಕಂತಹ ವಿಷಯದ ಮೇಲೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಹೆಚ್. ಡಿ. ದೇವೇಗೌಡರು ಅವಿಶ್ವಾಸ ನಿರ್ಣಯ ತೆಗೆದು ಕೊಂಡು ಬನ್ನಿ, ಆಗ ಎಷ್ಟು ಬೇಕಾದರೂ ಚರ್ಚೆ ಮಾಡೋಣ ಎಂದು ಹೇಳಿದರು. ಆ ವಿಷಯ ನಮಗೂ ಗೊತ್ತಿದೆ. ಅದನ್ನು ಯಾವಾಗ ತರಬೇಕು, ಯಾವ ಸಂದರ್ಭದಲ್ಲಿ ತರಬೇಕೆನ್ನುವುದು ನಮಗೂ ಗೊತ್ತಿದೆ. ಈ ಅವಿಶ್ವಾಸ ನಿರ್ಣಯ ಅತೀ ಶೀಘ್ರದಲ್ಲೇ ಬರಲಿದೆ, ಆ ಸಂದರ್ಭ ಬಹಳ ದೂರ ಏನೂ ಇಲ್ಲ.

ಇನ್ನು ಎರಡನೆಯ ವಿಚಾರ ಏನೆಂದರೆ, ಮಾನ್ಯ ದೇವೇಗೌಡರು ಈ ಬಗ್ಗೆ ಏನಾದರೂ ಆಪಾದನೆ ಮಾಡುವ ಸಂದರ್ಭದಲ್ಲಿ ಈ ಸದನದ ನಿಯಮಾವಳಿಗಳನ್ನು ಅನುಸರಿಸಬೇಕು ಎಂದು ಹೇಳಿದರು. ಅದು ನಮಗೂ ಗೊತ್ತಿದೆ. ಈ ಸದನದ ಸತ್‌ಸಂಪ್ರದಾಯ ಪರಂಪರೆ ಏನು ಇದೆ ಅದರ ಪ್ರಕಾರ ಹೋಗಬೇಕು

ಎನ್ನುವುದು ನಮಗೂ ಗೊತ್ತಿದೆ, ನಿಮಗೂ ಗೊತ್ತಿದೆ. ಅವರು ವಿರೋಧ ಪಕ್ಷದಲ್ಲಿದ್ದಾಗ ನೀವು ಏನೇನು ಹೇಳುತ್ತಿದ್ದಿರಿ ಎನ್ನುವುದು ಗೊತ್ತಿದೆ. ಯಾರೂ ಏನೂ ಹರಿಶ್ಚಂದ್ರರಲ್ಲ. ಈ ವಿಚಾರವನ್ನು ದಯಮಾಡಿ ಮಾನ್ಯ ದೇವೇಗೌಡರು ತಿಳಿದುಕೊಳ್ಳಬೇಕು.

ಶ್ರೀ ಎಸ್. ಯಡಿಯೂರಪ್ಪ.—ನಿಮಗೂ ಮತ್ತು ಅವರಿಗೂ ಆಗಿರತಕ್ಕಂಥಾ ಅನ್ಯಾಯದಲ್ಲಿ ನಮ್ಮನ್ನು ಏತಕ್ಕೆ ಹೊಣೆಗಾರರನ್ನಾಗಿ ಮಾಡುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಸದನದಲ್ಲಿ ಮಾನ್ಯ ಸದಸ್ಯರಾಗಲೀ ನಾನಾಗಲೀ ಮಾನ್ಯ ಸಚಿವರ ಮೇಲೆ ನೇರವಾದ ಆಪಾದನೆ ಮಾಡಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ನೇರವಾದ ಆಪಾದನೆ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲ. ಅವರು ಹಿಂಬಾಲಕರು ಎನ್ನುವ ಮಾತನ್ನು ಹೇಳಿದ್ದಾರೆ. ಬೇರೆ ಏನೂ ಹೇಳಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇಲ್ಲ. ಅವರು ನೇರವಾದ ಆಪಾದನೆ ಮಾಡಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲ. ಬೇಕಾದರೆ ಕಡತ ತೆಗೆಸಿ ನೋಡಿ. ಹಿಂಬಾಲಕರು ಎಂದು ಹೇಳಿದ್ದಾರೆ. ಪತ್ರಿಕೆಯಲ್ಲಿ ಬಂದಿರುವ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದಾರೇ ವಿನಹ ಇನ್ನೇನೂ ಅಲ್ಲ.

I am referring to the text only.

MR. SPEAKER.—Let me bring to the notice of the Hon. members that " there cannot be a debate on the statement made by the Minister. However, there is no bar on a notice being given for a debate on a subsequent date on a matter contained in the Statement. Only one question can be asked on a Calling Attention Statement by each member. "

SRI M. VEERAPPA MOILY.—No, no.

MR. SPEAKER.—How do you want me to regulate business ? I have allowed the Hon. Leader of Opposition nearly 20 minutes.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಬೇಕಾದರೆ ಹಿಂದಿನ ಕಡತವನ್ನು ತೆಗೆಯಿಸಿ ನೋಡಿ. ಯಾರಾದರೂ ಆಗಲಿ ಒಂದು ಕಾಲಿಂಗ್ ಅಟೆನ್‌ಷನ್ ಮೇಲೆ ಒಂದೇ ಪ್ರಶ್ನೆ ಹಾಕಿರುವುದು ಏನಾದರೂ ಇದೆಯೇ ತೆಗೆಯಿಸಿ ನೋಡಿ. ಕೆಲವು ಸಂದರ್ಭಗಳಲ್ಲಿ ಕಾಲಿಂಗ್ ಅಟೆನ್‌ಷನ್‌ಗೆ ಒಂದೇ ಪ್ರಶ್ನೆ ಕೇಳಬೇಕೆಂದು ಸೀಮಿತವಾಗಿರುವುದಿಲ್ಲ. ಹಲವು ಪ್ರಶ್ನೆಗಳನ್ನು ನಾವು ಕೇಳಬೇಕಾಗುತ್ತದೆ.

ಅಧ್ಯಕ್ಷರು.—ನನ್ನ ಹತ್ತಿರ ಇರುವ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್ ಆಫ್ ಪಾರ್ಲಿಮೆಂಟ್ ಬುಕ್‌ನಲ್ಲಿರುವ ಪ್ರಕಾರ ನಾನು ಹೇಳಿದ್ದೇನೆ. ಇದನ್ನೇ ನೀವೂ ಕೂಡ ಎಷ್ಟೋ ಸಾರಿ ಕೋಟ್ ಮಾಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ಹೊಸ ಸೂತ್ರವನ್ನು ಹಿಡಿದುಕೊಡು•ನಮ್ಮನ್ನು ಕಟ್ಟಿಹಾಕ ತಕ್ಕಂಥಾ ಕೆಲಸವನ್ನು ಮಾಡಬಾರದು. ಯಾರೂ ಮಾಡಬಾರದು. ಮಾನ್ಯ ಸದಸ್ಯರು ಮಾತನಾಡುವಾಗ ಅವರ ಹೆಸರೇನೂ ಎತ್ತಲಿಲ್ಲ. ಪತ್ರಿಕೆಯಲ್ಲಿ ಏನು ಇದೆ, ಜನ ಏನು ಹೇಳುತ್ತಿದ್ದಾರೆ ಅದನ್ನು ಪ್ರಸ್ತಾಪ ಮಾಡಿದ್ದಾರೆ ಅಷ್ಟೆ. ನಿಯಮ 311 ರ ಪ್ರಕಾರ ಇದರ ಚರ್ಚೆ ಆಗತ್ಯ ಇದ್ದರೆ ಮಾಡುತ್ತೇವೆ. ಮಾನ್ಯ ಸದಸ್ಯರು ಹಿಂಬಾಲಕರು ಎಂದು ಹೇಳಿದ್ದಾರೆಯೇ ವಿನಹ ಅವರ ಹೆಸರನ್ನು ಎತ್ತಿಲ್ಲ. ಆದುದರಿಂದ ಮಾನ್ಯ ದೇವೇಗೌಡರು ನಿಯಮದ ಪ್ರಕಾರ ಮಾತನಾಡಲಿ, ಬೇಕಾದರೆ ಚರ್ಚೆ ಮಾಡಲಿ ಎಂದು ಹೇಳುವುದು ನಮಗೂ ಗೊತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಎಲ್ಲರಿಗೂ ತಾವು ಮಾರ್ಗ ದರ್ಶನ ಮಾಡಬೇಕು. ಪತ್ರಿಕೆಗಳಲ್ಲಿ ಹಲವಾರು ತರಹ ಪತ್ರಿಕೆಗಳು ಇವೆ. ನಮ್ಮ ದೇಶದಲ್ಲಿ ಎಲ್ಲೋ ಜರ್ನಲಿಸಂ ಕೂಡ ಇದೆ. ಆದರೆ ಈ ದೇಶದಲ್ಲಿ ಯಾವ ಯಾವ ತರಹ ಪತ್ರಿಕೆಗಳು ಇವೆ ಅವುಗಳ ಗೌರವ, ಘನತೆ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಯಾವುದೋ ಒಂದು ಸ್ಥಳೀಯ ಪತ್ರಿಕೆಯನ್ನು ಅವರು ಮುಂದೆ ಇಟ್ಟುಕೊಂಡು ಮಾತನಾಡಲಿಕ್ಕೆ ಹೋಗಿದ್ದಾರೆ. ನಾನು ಇದರ ಬಗ್ಗೆ ಹೆಚ್ಚು ಕಾಲ ತೆಗೆದು ಕೊಂಡು ಮಾತನಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದು ಇಷ್ಟೆ. ಯಾವುದೇ ಒಂದು ಆಪಾದನೆ ಮಾಡಬೇಕಾದರೆ ಅವರು ನಿಯಮಾವಳಿ ಪ್ರಕಾರ ಮಾಡಲಿ. ಹಾಗೆಯೇ ಮಾನ್ಯ ಸಚಿವರಿಗೆ ಉತ್ತರ ಕೊಡುವ ಅಧಿಕಾರವೂ ಇದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—'ಶಕ್ತಿ' ಎನ್ನುವ ಪೇಪರ್ ಇದೂ ಕೂಡ ಒಂದು ಸ್ಟ್ಯಾಂಡರ್ಡ್ ಪೇಪರ್. ಇದರಲ್ಲಿ ಕೊಟ್ಟಿರತಕ್ಕಂಥ ವಿಷಯವನ್ನು ಅವರು ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ದೇಶದಲ್ಲಿ ಇರತಕ್ಕಂಥ ಎಲ್ಲಾ ಪತ್ರಿಕೆಗಳ ಗಮನವನ್ನು ನಾನು ಸೆಳೆಯಬೇಕಾದ ಅವಶ್ಯಕತೆ ಇಲ್ಲ. ಇದರ ಬಗ್ಗೆ ಅವರಿಗೂ ಗೊತ್ತಿದೆ, ತಮಗೂ ಗೊತ್ತಿದೆ. ಮಾನ್ಯ ಸದಸ್ಯರು ಇದರ ಬಗ್ಗೆ ಚರ್ಚೆ ಮಾಡಬೇಕು ಎನ್ನುವುದಾದರೆ ನಿಯಮಾವಳಿಗಳ ಪ್ರಕಾರ ಮಾಡಲಿ, ಬೇಡ ಎನ್ನುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರತಕ್ಕಂಥ ಹೇಳಿಕೆಯ ಬಗ್ಗೆ ನನ್ನ ವಿಷಯವನ್ನು ಸೀಮಿತಗೊಳಿಸಿ ಅವರಲ್ಲಿ ಒಂದು ವಿಚಾರ ಕೇಳುತ್ತೇನೆ. ಅದೇನೆಂದರೆ ತಾರೀಖು 1-1-1983 ರಿಂದ ಇಲ್ಲಿಯವರೆಗೆ 15 ಗಂಡಾನೆಗಳನ್ನು ಮತ್ತು 14-7-1983 ರಂದು ಇನ್ನೂ ಎರಡು ಆನೆಗಳನ್ನು ಮತ್ತು 26-8-1983 ರಂದು ಇನ್ನೂ ಎರಡು ಆನೆಗಳನ್ನು ಕಳ್ಳ ಬೇಟೆಗಾರರು ನಾಶಪಡಿಸಿದ್ದಾರೆ ಎಂದು ಅವರು ಹೇಳಿಕೆ ಕೊಟ್ಟಿದ್ದಾರೆ. ನಿಮ್ಮಲ್ಲಿರತಕ್ಕಂಥ ಅರಣ್ಯ ಸಿಬ್ಬಂದಿಯವರಿಗೆ ವೈರ್‌ಲೆಸ್ ಸೆಟ್, ವಾಕಿಟಾಕಿ ಬಗ್ಗೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಎರಡನೆಯದಾಗಿ, ಈ ಅರಣ್ಯ ಪ್ರದೇಶ ಸುಮಾರು 30 ಸಾವಿರ ಎಕರೆ ವಿಸ್ತೀರ್ಣ ಇದೆ ಎಂದು ಹೇಳಿದ್ದೀರಿ. ಈ ವಿಸ್ತಾರವಾದ ಪ್ರದೇಶಕ್ಕೆ 3 ಜನ ಅರಣ್ಯ ಪಾಲಕರು ಹಾಗೂ 6 ಜನ ಅರಣ್ಯ ರಕ್ಷಕರು ಇದ್ದಾರೆ ಎಂದು ಹೇಳಿದ್ದೀರಿ. ಒಟ್ಟು ಆರು ಮತ್ತು ಮೂರು ಜನ ಸೇರಿದರೆ ಒಂಭತ್ತು ಜನ ಆಯಿತು. ಇವರು ಸಾಮಾನ್ಯವಾಗಿ 60 ಮರ ನೋಡಬಹುದು. ಇಲ್ಲವೇ ಹೆಚ್ಚು ಎಂದರೆ 110 ಮರಗಳನ್ನು ನೋಡಬಹುದು. ಅದುದರಿಂದ ಇಷ್ಟೊಂದು ಅರಣ್ಯವನ್ನು ನೋಡಿಕೊಳ್ಳುವುದಕ್ಕೆ ಸಾಕಷ್ಟು ಸಿಬ್ಬಂದಿ ಸಾಕಾಗುವುದಿಲ್ಲ. ಸಿಬ್ಬಂದಿಯನ್ನು ಜಾಸ್ತಿ ಮಾಡಬೇಕು. ಮತ್ತು ನೀವು ಹೇಳುತ್ತೀರಿ ದಿನಗೂಲಿ ಮೇಲೆ ಆಳುಗಳನ್ನು ತೆಗೆದುಕೊಂಡು ಅವುಗಳನ್ನು ರಕ್ಷಣೆ ಮಾಡುತ್ತೇವೆ ಎಂದು. ಈ ಬಗ್ಗೆ ತಾವು ಜಾಸ್ತಿ ಸಿಬ್ಬಂದಿಯನ್ನು ತಕ್ಷಣ ನೇಮಕ ಮಾಡಬೇಕು. ಹಾಗೆ ಮಾಡದೇ ಹೋದರೆ ಕಾಡುಗಳಲ್ಲಿರತಕ್ಕಂಥ ವಸ್ತುಗಳು ಎಂದರೆ ನಾಟಾಗಳು ಮಗೈರೆ ಬಹಳ ಅಪಹರಣವಾಗುತ್ತವೆ. ಈ ದೃಷ್ಟಿಯಿಂದ ತಕ್ಷಣ ಜಾಸ್ತಿ ಸಿಬ್ಬಂದಿಯನ್ನು ನೇಮಿಸುವುದು ಒಳ್ಳೆಯದಲ್ಲವೇ ?

ಇನ್ನೊಂದು ವಿಚಾರ ಏನೆಂದರೆ ತಾವು ಈ ಹೇಳಿಕೆಯಲ್ಲಿ ಆ ಕಳ್ಳ ಬೇಟೆಗಾರರು ತಮ್ಮ ಆತ್ಯಾಧುನಿಕ ಬಂದೂಕುಗಳಿಂದ ಗುಂಡುಗಳನ್ನು ಹಾರಿಸಲಾಗಿ ಅರಣ್ಯ ಇಲಾಖೆಯ ಕಾವಲುಗಾರರಲ್ಲಿ ಒಬ್ಬರು ಸ್ಥಳದಲ್ಲೇ ಮೃತಪಟ್ಟರು ಎಂದು ಹೇಳಿದ್ದೀರಿ. ಅವರ ಹತ್ತಿರ ಇರುವುದು ಆತ್ಯಾಧುನಿಕ ಬಂದೂಕುಗಳ ಎಂದು ನೀವೇ ಹೇಳಿಕೊಂಡ ಮೇಲೆ ನಾವೇನು ಹೇಳಬೇಕಾಗುತ್ತದೆ ಎಂದರೆ ನಿಮ್ಮ ಹತ್ತಿರ ಎಂದರೆ ಸರ್ಕಾರದವರ ಹತ್ತಿರ ಇರತಕ್ಕಂಥ ಬಂದೂಕು, ಆ ಬಂದೂಕಿನಲ್ಲಿ ಹೊಡೆದರೆ ಅದು ಚಟಾರ್ ಎನ್ನುತ್ತದೆ, ಪಟಾರ್ ಎನ್ನುವುದಿಲ್ಲ ಎಂದು, ಅಂಥಾ ಬಂದೂಕನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ ಎಂದು ಹೇಳಬೇಕಾಗುತ್ತದೆ. ಮತ್ತೆ ಇನ್ನೊಂದು ವಿಚಾರ ಏನೆಂದರೆ ಈ ನಾಟಾವನ್ನು ಕದಿಯತಕ್ಕಂಥಾ ಜನ ಏನು ಇದ್ದಾರೆ ಅವರು ಮಾತ್ರ ಆನೆಗಳನ್ನು ಹೊಡೆಯುವುದಕ್ಕೆ ಗುರಿ ಇದೆ ಎನ್ನುವುದಾದರೆ ನಿಮ್ಮ ಗುರಿ ಏನಾಗಿದೆ ಎಂದು ನಾನು ಕೇಳಬೇಕಾಗುತ್ತದೆ. ನಿಮ್ಮ ಗುರಿ ಎಂದರೆ ನಿಮ್ಮ ಅರಣ್ಯ ಸಿಬ್ಬಂದಿಯವರು ಗುರಿಯನ್ನು ಹೊಂದಿಲ್ಲವೇ, ಅವರು ಏನು ಮಾಡುತ್ತಿದ್ದರು ಎಂದು ಕೇಳಬೇಕಾಗುತ್ತದೆ. ಸಿಬ್ಬಂದಿಗಳೊಡನಿದ್ದ ಅರಣ್ಯ ಪಾಲಕರು 4-5 ಗುಂಡುಗಳನ್ನು ಹಾರಿಸಿದಾಗ ಕಳ್ಳ ಬೇಟೆಗಾರರು ಹೆದರಿ ಪರಾರಿಯಾದರು ಎಂದು ಹೇಳಿದ್ದೀರ.

ಅರಣ್ಯ ರಕ್ಷಣೆಗೆ ಆದು ನಾಟಾ ರಕ್ಷಣೆ ಮಾಡುವುದು ಆಗಿರಬಹುದು ಅಥವಾ ಆನೆಗಳನ್ನು ರಕ್ಷಣೆ ಮಾಡುವುದು ಆಗಿರಬಹುದು, ಅಥವಾ ಮತ್ತೊಂದು ರಕ್ಷಣೆ ಮಾಡುವುದು ಆಗಿರಬಹುದು. ತಾವು ಇದಕ್ಕೆಲ್ಲಾ ಬೇರೆ ಬೇರೆ ರೀತಿಯಾದಂಥ ವ್ಯವಸ್ಥೆಯನ್ನು ಮಾಡದೇ ಇದ್ದರೆ ಇಲ್ಲಿ ಹೇಳಿಕೆ ಮಾಡುವುದು ಮಾತ್ರ ಉಳಿದು ಬಾಕಿ ಕೆಲಸವೇನೂ ಆಗುವುದಿಲ್ಲ. ಬೇರೊಂದು ವ್ಯವಸ್ಥೆಯನ್ನು ತಾವು ಮಾಡಬೇಕಾಗುತ್ತದೆ. ತಾವು ಈ ದಿಸೆಯಲ್ಲಿ ಏನೇನು ಮಾಡುತ್ತೀರಿ ಎಂದು ಸದನಕ್ಕೆ ದಯಮಾಡಿ ತಿಳಿಸಿದರೆ ಒಳ್ಳೆಯದು, ಇಲ್ಲದೇ ಹೋದರೆ ಅಲ್ಲಿ ಯಾವುದನ್ನೂ ಉಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಎಸ್. ಕಾಳಮರಿಗೌಡ.—ಈ ವಿಷಯದ ಬಗ್ಗೆ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ 'ಗುಮಾನಿಯ ಮೇಲೆ ಮೂರು ಜನರನ್ನು ಗುರುತಿಸಲಾಗಿದೆ ಎಂದು ಹೇಳಿದ್ದಾರೆ. ಈ ಗುರುತಿಸಲಾದವರನ್ನು ಬಿಡುಗಡೆ ಮಾಡುವುದಕ್ಕೆ ಬೆಂಗಳೂರಿನಿಂದ ಫೋನ್ ಕೂಡ ಬಂದಿದೆ ಎಂದು ಕೇಳಿದ್ದೇನೆ. ಇದು ನಿಜವೇ ? ಕಳ್ಳ ಬೇಟೆಗಾರರು ಗುಂಡು ಹಾರಿಸಿದಾಗ ಅರಣ್ಯ ಕಾವಲುಗಾರನಾದ ವೃಥ್ವಿಕುಮಾರ್ ಎಂಬುವನ್ನು ಸ್ಥಳದಲ್ಲಿಯೇ ಮೃತಪಟ್ಟನು ಎಂದು ಹೇಳಿದ್ದಾರೆ. ಈತನ ಶವಸಂಸ್ಕಾರಕ್ಕೆ ತಾವು ಕೇವಲ ನಾಲ್ಕುನೂರು ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಇವನು ಕರ್ತವ್ಯದಲ್ಲಿ ಪ್ರಾಣವನ್ನು ತ್ಯಾಗಮಾಡಿರುವುದರಿಂದ ಸರ್ಕಾರದ ವತಿಯಿಂದ ಇನ್ನೂ ಹೆಚ್ಚಿನ ಹಣವನ್ನು ಕೊಡಬೇಕಾಗಿತ್ತು. ಇದನ್ನು ಕೊಡುವ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ನಾನು ಹೇಳುತ್ತೇನೆ. ಇಲ್ಲಿ 30 ಸಾವಿರ ಎಕರೆ ಅರಣ್ಯಕ್ಕೆ ಕೇವಲ ಆರು ಜನ ಕಾವಲುಗಾರರಿದ್ದು ಅವರಿಂದ ಸರಿಯಾದ ರಕ್ಷಣೆಯ ಕೆಲಸ ವಾಗುತ್ತಿಲ್ಲ. ಇತ್ತೀಚೆಗೆ ಕಾಡು ಹೆಚ್ಚಿನ ರೀತಿಯಲ್ಲಿ ನಾಶವಾಗುತ್ತಿರುವುದರಿಂದ ಸರ್ಕಾರದವರು ಇವರಿಗೆ ಆರಮ್ ಗನ್ಸ್ ಕೊಟ್ಟು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ದುರ್ದೈವದ ಸಂಗತಿ. ಇವತ್ತು ಅರಣ್ಯವೂ ನಾಶವಾಗುತ್ತಿದೆ, ಆನೆಗಳೂ ಹೋಗುತ್ತಿವೆ. ಈ ಇಲಾಖೆಯ ಮಂತ್ರಿಗಳು ಯುವಕರು, ಅವರು ನಿಸ್ಸಹಾಯಕರಾಗಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಅಧಿಕಾರಿಗಳು ಗುಂಡನ್ನು ಹಾರಿಸಿದಾಗ ಕಳ್ಳ ಬೇಟೆಗಾರರು ಹೆದರಿ ಪರಾರಿಯಾದರು ಎಂದು ಹೇಳಿದ್ದಾರೆ. ಗುಂಡನ್ನು ಹಾರಿಸಿದಾಗ ಅವರು ನಿಂತು ಕೊಳ್ಳುವುದಕ್ಕಾಗುತ್ತದೆಯೇ ? ಇವರು ಹೊಡೆದಂಥ ಗುಂಡು ಎಲ್ಲಿಗೋ ಹೋಯಿತು. ಕಳ್ಳ ಬೇಟೆಗಾರರಿಗೆ ಹೊಡೆಯುವ ಗುಂಡು ಎಲ್ಲಿಗೋ ಹೋಯಿತು. ಈ ಘಟನೆಯಲ್ಲಿ ಯುವಕ ಕಾವಲುಗಾರ ಮೃತ ಪಟ್ಟಿದ್ದಾನೆ. ಹಿಂದೆ ಮಾನ್ಯ ದೇವೇಗೌಡರು, ಬೊಮ್ಮಾಯಿಯವರು ಮತ್ತು ಪಟೇಲರು ಈ ಕಡೆ ಇದ್ದಾಗ ಅರಣ್ಯದ ಬಗ್ಗೆ ರೋಧನ ಮಾಡುತ್ತಿದ್ದರು.

ಅಧ್ಯಕ್ಷರು.—ಆ ಕಾಲದಲ್ಲಿ ಮಾಡಿದ್ದೆಲ್ಲವೂ ಅರಣ್ಯ ರೋಧನ ಎಂದು ಹೇಳುತ್ತೀರೋ ?

ಶ್ರೀ ಜೆ. ಡಿ. ಸೋಮಪ್ಪ.— ಈ ಕಡೆ ಇದ್ದವರು ಆ ಕಡೆಗೆ ಹೋದಾಗ ಅರಣ್ಯವನ್ನು ಏಕೆ ರಕ್ಷಣೆ ಮಾಡಬಾರದು ಎನ್ನುವುದು ನಮ್ಮ ಪ್ರಶ್ನೆ. ನಾನೂ ಕೂಡ ಅರಣ್ಯ ಪ್ರದೇಶದಿಂದ ಬಂದಿರತಕ್ಕವನು. ಆದ್ದರಿಂದಲೇ ನಾನು ಇಲ್ಲಿ ಇದರ ಬಗ್ಗೆ ಎರಡು ಮಾತುಗಳನ್ನು ಹೇಳುತ್ತಿದ್ದೇನೆ. ಅರಣ್ಯ ದೇಶದ ಪ್ರಮುಖ ಸಂಪತ್ತು ಎನ್ನುವುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಇಂಥಾದ್ದನ್ನು ಸಂರಕ್ಷಣೆ ಮಾಡಲಿಕ್ಕೆ ಸರ್ಕಾರದವರು ಇವತ್ತು ಅಸಮರ್ಥರಾಗಿದ್ದಾರೆ. ಪಾಪ, ಮಾನ್ಯ ಮಂತ್ರಿಗಳಿಗೆ ಕ್ಯಾಬಿನೆಟ್ ದರ್ಜೆಯನ್ನು ಕೊಡಬೇಕಾಗಿತ್ತು. ಇವರು ಅಧಿಕಾರಿಗಳಿಗೆ ಹೇಳಿದರೆ ಅವರು ಇವರ ಮಾತನ್ನೇ ಕೇಳುವುದಿಲ್ಲ. ಇಂಥ ಕಾಲದಲ್ಲಿ ಇವರು ತಮ್ಮ ಹೇಳಿಕೆಯಲ್ಲಿ ಅಧಿಕಾರಿಗಳು ನಾಲ್ಕೈದು ಗುಂಡನ್ನು ಹೊಡೆದಾಗ ಕಳ್ಳ ಬೇಟೆಗಾರರು ಪರಾರಿಯಾದರು ಎಂದು ಹೇಳಿದ್ದಾರೆ. ಪರಾರಿಯಾಗದೆ ಅವರು ಏನ್ ಮಾಡಬೇಕಾಗಿತ್ತು ?

ಅಧ್ಯಕ್ಷರು.—ಮಾನ್ಯ ಸದಸ್ಯರು ಪ್ರಶ್ನೆ ಕೇಳುವುದನ್ನು ಬಿಟ್ಟು ಬೇರೆಲ್ಲವನ್ನೂ ವ್ಯಾಖ್ಯಾನ ಮಾಡುತ್ತಿದ್ದಾರೆ. ತಾವು ಪ್ರಶ್ನೆಯನ್ನು ಮಾತ್ರ ಕೇಳಬೇಕು.

ಶ್ರೀ ಜೆ. ಡಿ. ಸೋಮಪ್ಪ.—ತಾವು ಇಲ್ಲಿ ನಮ್ಮ ರಕ್ಷಣೆಗೆ ಬರಬೇಕು. ಇಂದು ಅರಣ್ಯವನ್ನು ರಕ್ಷಣೆ ಮಾಡುವವರು ಯಾರು ? ನಾವೆಲ್ಲರೂ ಸೇರಿ ಈ ಕೆಲಸವನ್ನು ಮಾಡಬೇಕಾಗಿದೆ. ವಿರೋಧ ಪಕ್ಷದವರು ಸರ್ಕಾರದವರ ಲೋಪದೋಷಗಳನ್ನು ತೋರಿಸಿ ಸರಿಯಾದ ದಾರಿಯಲ್ಲಿ ಹೋಗಿ ಎಂದು ಹೇಳುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಈಗ ಅರಣ್ಯದಲ್ಲಿ ಕಳ್ಳತನ ಜಾಸ್ತಿಯಾಗಿದೆ. ತಾವು ಅಧಿಕಾರಿಗಳನ್ನು ಸ್ವಲ್ಪ ಬಂದೋಬಸ್ತ್ ಮಾಡಬೇಕು. ಇದರ ಬಗ್ಗೆ ನನ್ನಲ್ಲಿ ಮಾಹಿತಿ ಇದೆ. ಆದರೆ ಅದನ್ನು ಇಲ್ಲಿ ಹೇಳುವುದಕ್ಕೆ ಸಮಯವಿಲ್ಲ. ಮಾನ್ಯ ಅರಣ್ಯ ಮಂತ್ರಿಗಳು ಬಹಳ ಒಳ್ಳೆಯವರು, ಅವರು ಇನ್ನೂ ಸಾಲವನ್ನೇ ತೀರಿಸಿಕೊಂಡಿಲ್ಲ ಎಂದು ಕೇಳಿದ್ದೇನೆ. ಇವರು ಅರಣ್ಯವನ್ನು ಕಾಪಾಡಬೇಕಾದರೆ ಹೆಚ್ಚಿನ ಶಕ್ತಿ ಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ.—ಅವರು, ಮಾನ್ಯ ಮಂತ್ರಿಗಳು ಇನ್ನೂ ಸಾಲವನ್ನು ತೀರಿಸಿಕೊಂಡಿಲ್ಲ ಎಂದು ಹೇಳಿದರು, ಅವರಿಗೆ ವೈಯಕ್ತಿಕ ತೊಂದರೆ ಇರಬಹುದು, ಉಳಿದವರೆಲ್ಲರೂ ಸಾಲವನ್ನು ತೀರಿಸಿಕೊಂಡಿದ್ದಾರೆಂದು ಹೇಳುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉಳಿದವರು ಸಾಲವನ್ನು ತೀರಿಸಿಕೊಳ್ಳುವುದಕ್ಕೆ ಮುಂಚೆ ಮಾನ್ಯ ಬಂಗಾರಪ್ಪನವರು ಸಾಲ ತೀರಿಸಿಕೊಂಡಿದ್ದಾರೆಯೇ ಎಂದು ಗೊತ್ತಾಗಬೇಕು.

ಒಬ್ಬ ಸದಸ್ಯರು.—ಬಂಗಾರಪ್ಪನವರಿಗೆ ಸಾಲವೇ ಇಲ್ಲ.

ಶ್ರೀ ಬಿ. ಎ. ಜೀವಿಜಯ (ರಾಜ್ಯ ಅರಣ್ಯ ಸಚಿವರು).—ಮಾನ್ಯ ವಿರೋಧ ಪಕ್ಷದ ನಾಯಕರಾದ ಮೊಯಿಲಿಯವರು ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮೂರು ಪ್ರಶ್ನೆಗಳನ್ನು ಹಾಕಿದ್ದಾರೆ. ಹುಣಸೂರಿನ ತಿತಿಮತಿಯಲ್ಲಿ ಆನೆಗಳ ಸಂಖ್ಯೆಗಳು ಕಡಿಮೆಯಾಗುತ್ತಿವೆ, ಈಗ ಆನೆಗಳನ್ನು ಏನು ಕೊಂದಿದ್ದಾರೆಂದು ಹೇಳಿದ್ದೇವೆ ಅದಕ್ಕಿಂತಲೂ ಹೆಚ್ಚು ಆನೆಗಳನ್ನು ಕೊಂದಿದ್ದಾರೆಂದು ಅವರು ಹೇಳಿದ್ದಾರೆ. ಅದು ಸರಿಯಲ್ಲ. 14–7–1983 ರಿಂದ 31–8–1983 ರವರೆಗೆ ತಿತಿಮತಿ ಅರಣ್ಯದಲ್ಲಿ ಕಳ್ಳ ಬೇಟೆಗಾರರು ಆನೆಗಳನ್ನು ಕೊಂದಿದ್ದಾರೆ, ಕೊಡಗಿನಲ್ಲಿಯೂ ಈ ರೀತಿಯಾಗಿ ಆನೆಗಳನ್ನು ಕೊಂದಿರತಕ್ಕದ್ದು ಇದೇ ಪ್ರಥಮ ಬಾರಿ. ಇದು ಸಾಮಾನ್ಯವಾಗಿ ಕೊಳ್ಳೇಗಾಲ, ಬಂಡೀಪುರ, ಈ ಕಡೆಗಳಲ್ಲಿ ದುಷ್ಕರ್ಮಿಗಳ ತಂಡದವರು ದಂತಕ್ಕಾಗಿ ಈ ಕೆಲಸವನ್ನು ಮಾಡುತ್ತಿದ್ದರು. ಆದರೆ ದುರ್ದೈವದಿಂದ 7 ಆನೆಗಳು ಹತ್ಯೆಯಾಗಿವೆ. ಇದರಲ್ಲಿ ಅರಣ್ಯದ ಅಧಿಕಾರಿಗಳು ಶಾಮೀಲು ಆಗಿರಬಹುದು ಎನ್ನುವ ಸಂಶಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ವ್ಯಕ್ತಮಾಡಿದ್ದಾರೆ. ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ, ಅವರು ಇಂಥ ಸಂಶಯ ಪಡಲಿಕ್ಕೆ ಕಾರಣವಿಲ್ಲ. ಕಳೆದ ತಿಂಗಳು 26 ನೆಯ ತಾರೀಖು ಏನು ಆನೆಗಳ ಹತ್ಯೆಯಾಯಿತು ಆಗ ನಾನು ಕೊಡಗಿನಲ್ಲಿದ್ದೆ. ವಿಷಯ ತಿಳಿದ ಕೂಡಲೇ ನಾನೂ ಕೂಡ ತಿತಿಮತಿಗೆ ಹೋದೆ, ಅಲ್ಲಿ ಪೃಥ್ವಿಕುಮಾರ್ ಮೃತಪಟ್ಟಿದ್ದನ್ನು ನಾನೂ ಹೋಗಿ ನೋಡಿದೆ. ಮಾನ್ಯ ಬಂಗಾರಪ್ಪನವರು ನಾವು ಅಧಿಕಾರಿಗಳಿಗೆ ಹೈವೆಲಾಸಿಟಿಯ ಗನ್ ಕೊಟ್ಟಿಲ್ಲ ಎಂದು ಹೇಳಿದರು. ಈ ಹತ್ಯೆ ತಿಳಿದ ಕೂಡಲೇ ಅರಣ್ಯ ರಕ್ಷಣಾ ತಂಡದವರು ಬೆಳಿಗ್ಗೆ 8 ಗಂಟೆಗೆ ತಿತಿಮತಿಗೆ ಹೋದರು. ಅನೇಕ ಕಡೆಯಿಂದ ಅರಣ್ಯ ಕಾವಲನ್ನು ಮಾಡುವುದಕ್ಕೆ ಇವರು ಸಿದ್ಧರಾಗಿದ್ದರು. ಇವರು ಹತ್ತು ಜನರು ಮಾತನಾಡಿ

ಕೊಂಡು ಹೋಗುತ್ತಿದ್ದುದನ್ನು ಹಿಂದಿನಿಂದ ನೋಡಿದ ಕಳ್ಳ ಬೇಟೆಗಾರ ಇವರ ಕಡೆ ಗುಂಡು ಹಾರಿಸಲಾಗಿ ಅವರು ಹೈವೆಲಾಸಿಟಿ ಗುಂಡನ್ನು ಉಪಯೋಗಿಸಿದ್ದರಿಂದ ಅದು ಕಾವಲುಗಾರನೊಬ್ಬನ ಮೇಲೆ ಹಾರಿ ಅವನು ಸ್ಥಳದಲ್ಲಿಯೇ ಮೃತಪಟ್ಟ. ಅವನ ಶವದಿಂದ 0.3 ಬುಲೆಟ್‌ನ್ನು ಸಹ ನಾವು ರಿಕವರ್ ಮಾಡಿದ್ದೇವೆ. ನಮ್ಮ ಅಧಿಕಾರಿಗಳ ಹತ್ತಿರ ಡಬ್ಬಲ್ ಬ್ಯಾರಲ್ ಗನ್ ಇತ್ತು. ನಾವು ಅರಣ್ಯ ಇಲಾಖೆಯವರಿಗೆ ಹೈವೆಲಾಸಿಟಿ ಗನ್ನನ್ನು ಕೊಟ್ಟಿಲ್ಲ. ಕಳ್ಳ ಬೇಟೆಗಾರ ಹೊಡೆದ ಕೂಡಲೇ ನಮ್ಮ ಸಿಬ್ಬಂದಿಯವರು ಗುಂಡು ಹಾರಿಸಿದ್ದಾರೆ. ಆದರೆ ಅದು ಯಾರಿಗೂ ಮುಟ್ಟಿಲಿಲ್ಲ. ಆದುದರಿಂದ ಅವರು ಹಾಕಿದ್ದಾರೆ. ಅವರಿಗೆ ಗಾಬರಿಯಾಯಿತು. ಅನಿರೀಕ್ಷಿತವಾಗಿ ಅವರ ಮೇಲೆ ಧಾಳಿ ನಡೆದಿದೆ. ನಮ್ಮ ಅರಣ್ಯ ರಕ್ಷಕ ತೀರಿಹೋಗಿದ್ದಾನೆ. ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀಮಾನ್ ಕರಂಬಯ್ಯನವರ ಮನೆಗೆ ಸರ್ಚ್ ವಾರಂಟ್ ಕಳಿಸಿ, ಕಾಂಗ್ರೆಸ್ ಕಾರ್ಯಕರ್ತರನ್ನು ಬಗ್ಗುಬಡಿಯಲಿಕ್ಕೆ ಈ ಸರ್ಕಾರ ಉಪಯೋಗಿಸಿಕೊಂಡಿದೆ ಎಂದು ಹೇಳಿದರು. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ, ನಾವು ಆ ರೀತಿ ಮಾಡುವುದಿಲ್ಲ. ಕರಂಬಯ್ಯನವರು 26 ನೇ ತಾರೀಖಿನ ಆ ಕಡೆ ಬಂದಿದ್ದರು. ಕೊಡಗಿನಲ್ಲಿ 20 ರೈಫಲ್‌ಗಳು ಮಾತ್ರ ಇವೆ. ಕರಂಬಯ್ಯನವರ ಹತ್ತಿರ. 22 ರೈಫಲ್ ಇದೆ. ಹಿಂದಿನ ದಿವಸ ಕರಂಬಯ್ಯನವರು ಬಂದು ಹೋದಾಗ ಜನರು ಕಂಡಿದ್ದಾರೆ. ಆ ಒಂದು ಗುಮಾನಿಯಿಂದ ಅವರ ಮನೆಗೆ ಹೋಗಿದ್ದು ನಿಜ. ಅವರ ಮನೆಗೆ ಗುಮಾನಿ ಮೇಲೆ ಸರ್ಚ್ ವಾರಂಟ್ ತೆಗೆದುಕೊಂಡು ಹೋದದ್ದೂ ನಿಜ. ಮಾನ್ಯ ಕರಂಬಯ್ಯನವರು ಗಣ್ಯ ವ್ಯಕ್ತಿ, ತಾಲ್ಲೂಕು ಬೋರ್ಡ್ ಅಧ್ಯಕ್ಷರಾಗಿದ್ದರು, ನನಗೂ ಅವರ ಮೇಲೆ ಗೌರವವಿದೆ. ಅವರು ಆನೆಯನ್ನು ಹತ್ಯೆ ಮಾಡಿದ್ದಾರೆಂದರೆ ನಾನು ನಂಬುವುದಿಲ್ಲ. ಹಿಂದಿನ ದಿವಸ ಅವರ ಕಾರು ಹೋದಾಗ ಜನರು ಕಂಡಿದ್ದಾರೆ. ಆದರ ಗುರುತಿನಿಂದ ಅರಣ್ಯ ರಕ್ಷಕ ದಳದವರು ಫಾಲೋ ಮಾಡಿಕೊಂಡು ಹೋಗಿದ್ದಾರೆ. ಅವರ ಮೇಲೆ ಸರ್ಚ್ ವಾರಂಟ್ ಹಾಕಿ ಪರೀಕ್ಷೆ ಮಾಡಿದ್ದೇ ಹೊರತು ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಆಪಾದನೆ ಮಾಡಲಿಕ್ಕೆ ನಾವು ಎಂದೂ ಪ್ರಯತ್ನ ಪಟ್ಟಿಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹೇಳುತ್ತಾ ಇದ್ದೇನೆ. ಎರಡನೆಯದಾಗಿ, ಮಾನ್ಯ ಬಂಗಾರಪ್ಪನವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ಅರಣ್ಯ ಇಲಾಖೆಯಲ್ಲಿ ನಮಗೆ ಆನೆಗಳನ್ನು ರಕ್ಷಣೆ ಮಾಡುವುದಕ್ಕೆ ಪ್ರತ್ಯೇಕವಾದಂಥ ಸಿಬ್ಬಂದಿ ಇಲ್ಲ. ಅದಕ್ಕಾಗಿ ಈಗಾಗಲೇ ಎರಡು ಸಭೆಗಳನ್ನು ಕರೆದು ನಾವು 110 ವೈರ್‌ಲೆಸ್ ಸೆಟ್ಟುಗಳನ್ನು ಕೊಂಡುಕೊಳ್ಳಬೇಕು ಎಂದು ಪ್ರಯತ್ನ ಪಟ್ಟಿದ್ದೇವೆ. 52 ಸ್ನ್ಯಾಟಿಕ್ ಮತ್ತು 58 ಮೊಬೈಲ್ ಮತ್ತು ವಾಕಟಾಕಿಗಳನ್ನೂ ಕೂಡ ಅರಣ್ಯ ಇಲಾಖೆಯ ಸಿಬ್ಬಂದಿಯವರಿಗೆ ಕೊಡಬೇಕು ಎಂದು ಮಾಡಿಕೊಂಡಿದ್ದೇವೆ. ಅಲ್ಲದೆ ಸಿಬ್ಬಂದಿ ಕೂಡ ಕಡಿಮೆ ಇದ್ದಾರೆ. ಆನೆಗಳನ್ನು ಮತ್ತು ವನ್ಯ ಮೃಗಗಳನ್ನು ರಕ್ಷಣೆ ಮಾಡುವುದಕ್ಕೆ ಸಿಬಂದಿ ಕಡಿಮೆ ಇದ್ದಾರೆ. ಅದಕ್ಕಾಗಿ 142 ಸಿಬ್ಬಂದಿಗಳನ್ನು ಹೊಸದಾಗಿ ತೆಗೆದು ಕೊಳಲಿಕ್ಕೆ ಅರಣ್ಯ ಇಲಾಖೆಯಲ್ಲಿ ಪ್ರಯತ್ನಪಡುತ್ತಾ ಇದ್ದೇವೆ. ನಮ್ಮ ಇಲಾಖೆಯಲ್ಲಿ ಇದುವರೆಗೆ ಕೂಡ ಹೈವೆಲಾಸಿಟಿ ಗನ್ಸ್ ಇಲ್ಲ. ಅದಕ್ಕಾಗಿ ರಾಜ್ಯದ ಉನ್ನತ ಪೋಲೀಸ್ ಅಧಿಕಾರಿಗಳ ಮತ್ತು ಅರಣ್ಯಾಧಿಕಾರಿಗಳ ಸಭೆಯನ್ನು ಎರಡು ಸಾರಿ ಕರೆದು ಒಂದು ಹೊಸ ಯೋಜನೆಯನ್ನು ಹಾಕಿಕೊಂಡು ಫಾರೆಸ್ಟರ್ಸ್‌ಗೆ ಹೈವೆಲಾಸಿಟಿ ರೈಫಲ್‌ಗಳನ್ನು ಕೊಡುವಂತೆಯೂ, ಆರ್.ಎಫ್.ಒ. ಗಳಿಗೆ ರೈಫಲ್‌ಗಳನ್ನು ಕೊಡುವಂತೆಯೂ, ಸಿಬ್ಬಂದಿ ವರ್ಗಕ್ಕೆ ರೈಫಲ್‌ಗಳನ್ನು ಕೊಡುವಂತೆಯೂ ತೀರ್ಮಾನ ಮಾಡಿದ್ದೇವೆ. ಅದಕ್ಕೆ ವೆಚ್ಚ 24 ಲಕ್ಷ ರೂಪಾಯಿಗಳು ಆಗುತ್ತದೆ, ಇವುಗಳನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದೇವೆ. ಆದುದರಿಂದ ಮಾನ್ಯ ಬಂಗಾರಪ್ಪನವರು ಏನು ಸಲಹೆಯನ್ನು ಕೊಟ್ಟಿದ್ದಾರೆ ಅವರ ಬಗ್ಗೆ ಈಗಾಗಲೇ ನಾವು ಕಾರ್ಯಕ್ರಮ ಕೈಗೊಂಡಿದ್ದೇವೆ. ಮಾನ್ಯ ಕಾಳಮರಿಗೌಡರು ನಾವು ಸತ್ತವರಿಗೆ 400 ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದರು. ನಾವು ಬೆನೆವಲೆಂಟ್ ಫಂಡ್‌ನಿಂದ ಪೃಥ್ವಿಕುಮಾರ್ ಅವರಿಗೆ 15 ಸಾವಿರ ರೂಪಾಯಿಗಳನ್ನು ಕೊಡುತ್ತಾ ಇದ್ದೇವೆ. ಮಾನ್ಯ ಚಿಕ್ಕೇಗೌಡರು ನನಗೆ ಪಾಠ ಕಲಿಸಬೇಕಾದ್ದಿಲ್ಲ; ನನ್ನ ವ್ಯಕ್ತಿತ್ವವನ್ನು ಕೆಸಿದು ಕೊಳ್ಳುವುದಕ್ಕೆ ಅವರಿಗೆ ಹಕ್ಕಿಲ್ಲ, ರಾಜಕೀಯ ಜೀವನದಲ್ಲಿ ಪರಿಶುದ್ಧತೆಯಿಂದ ಬಂದವನು ನಾನು, ಯಾರ ಹಂಗಿಗೂ ಯಾರಿಗೂ ಕೈ ಚಾಚಿಲ್ಲ. ಅವರು ಏಕೆ ಈ ರೀತಿ ಹೇಳುತ್ತಾರೋ ನನಗೆ ಗೊತ್ತಿಲ್ಲ. ವಿಷಯ ತಿಳಿದುಕೊಳ್ಳದೆ ಮಾತನಾಡುವುದು ಸರಿಯಲ್ಲ. ನನ್ನ ಹಿಂಬಾಲಕರು ಯಾರಿಗೂ ಕೂಡ ಅರಣ್ಯ ನಾಶ ಮಾಡಿಕೊಳ್ಳಿ ಎಂದು ಹೇಳಿಲ್ಲ, ಅಂತಹ ಕಳ್ಳಕಾಕರು ನಮ್ಮ ಪಕ್ಷದಲ್ಲಿಲ್ಲ. ಹೊಸಕೋಟೆಯ ಎಂ.ಎಲ್. ಎ. ಮಾನ್ಯ ಚಿಕ್ಕೇಗೌಡರು ಒಂದು ಸಲ ನನಗೆ ಫೋನ್ ಮಾಡಿದ್ದರು. ಒಬ್ಬ ಆರ್.ಎಫ್.ಒ.ಅನ್ನು ಟ್ರಾನ್ಸ್‌ಫರ್ ಮಾಡಿದೆ, ಅವನಿಗೆ ಅಲ್ಲಿ 20 ಎಕರೆ ಗ್ರೇಪ್ ವೈನ್ಸ್ ಇದೆ, ಇನ್ನೊಂದು 60 ಎಕರೆ ಯೂಕಲಿಪ್ಟಸ್ ತೋಟ ಇದೆ, ಅದುದರಿಂದ ಈ ಆರ್.ಎಫ್.ಒ. ಅನ್ನು ಏನು ಟ್ರಾನ್ಸ್‌ಫರ್ ಮಾಡಿದ್ದಾರೆ ಅದನ್ನು ಕ್ಯಾನ್ಸಲ್ ಮಾಡಿ ಎಂದು ಕೇಳಿದರು. ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದೆ. ಆ ಒಂದು ಸಿಟ್ಟಿನಲ್ಲಿ ಇದ್ದರು ಮತ್ತು ಇವರ ಕ್ಷೇತ್ರಕ್ಕೆ ಜನತಾ ಪಕ್ಷದ ಕಾರ್ಯಕರ್ತರು ಹೋದಾಗ ಕ್ಷುಲ್ಲಕ ಆಪಾದನೆ ಮಾಡಿದ್ದಾರೆ. ಮಾನ್ಯ ಚಿಕ್ಕೇಗೌಡರು ಬೇಜವಾಬ್ದಾರಿಯಿಂದ ಮಾತನಾಡಿದ್ದಾರೆ. ನನ್ನ ರಾಜಕೀಯ ಜೀವನವನ್ನ ಪ್ರಶ್ನೆ ಮಾಡುವುದಕ್ಕೆ ಇವರಿಗೆ ಯಾವ ಹಕ್ಕೂ ಇಲ್ಲ ಎಂದು ನಾನು ಹೇಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದರಲ್ಲಿ ರಾಜಕೀಯ ಬೆರೆಸುತ್ತಾ ಇಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ತಾವು ರಾಜಕೀಯ ಬೆರೆಸುವುದಲ್ಲ. ನಮ್ಮ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಷ್ಠಿತ ಗೌರವಾನ್ವಿತರು, ಅವರ ಮನೆಗೆ ಆಧಾರರಹಿತವಾಗಿ ಸರ್ಚ್‌ವಾರಂಟ್ ಕೊಂಡು ಹೋಗಿದ್ದಾರೆ ಎಂದು ಹೇಳಿದೆ, ಆಧಾರರಹಿತ ಎಂದು ಹೇಳಿದೆ. ಒಬ್ಬ ಗೌರವಾನ್ವಿತ ಕಾಂಗ್ರೆಸ್ ಕಾರ್ಯಕರ್ತನ ಮನೆಗೆ ಸರ್ಚ್‌ವಾರಂಟ್ ಕೊಂಡುಹೋಗಿ ಸರ್ಚ್ ಮಾಡತಕ್ಕಂಥ ಪ್ರಯತ್ನ ನಡೆದಿದೆ. ಇದರಿಂದ ಖಂಡಿತವಾಗಿಯೂ ಸರ್ಕಾರಕ್ಕೆ ಯೋಗ್ಯತೆ, ಗೌರವ ದೊರೆಯುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ನಾನು ಒಂದು ಸ್ಪಷ್ಟೀಕರಣ ಕೊಡುತ್ತೇನೆ. ಮಾನ್ಯ ಬೊಮ್ಮಾಯಿ ಯವರು ಸೃಷ್ಟೀಕರಣ ಕೊಟ್ಟಿದ್ದಾರೆ. ಅವರು ಅಧಿಕೃತವಾಗಿ ಹೋಗಿದ್ದಾರೆ ಎಂದು ಹೇಳಿದೆನೇ ಹೊರತು ಅವರು ಹೋಗಿದ್ದರು ಏನ್ನುವುದರ ಬಗ್ಗೆ ಸಿಟ್ಟು ಇಲ್ಲ. ರಾಜಕೀಯವಾಗಿ ಏನಾದರೂ ಮಾಡಲಿ. ಅವರು ನಮ್ಮ ಕ್ಷೇತ್ರಕ್ಕೆ ಬರಲಿ, ನನಗೆ ರಾಜಕೀಯ ಮಾಡುವುದಕ್ಕೆ ಆಗುವುದಿಲ್ಲ. ಏನೋ ತಿಳಿದುಕೊಂಡುಬಿಟ್ಟಿದ್ದಾರೆ. ಆರ್.ಎಫ್.ಒ ವಿಷಯದಲ್ಲಿ ಶಾಮೀಲಾಗಿ ನಾನು ಏನೂ ಹೇಳಲಿಲ್ಲ.

(ಗೊಂದಲ)

MR. SPEAKER.—There are about fifteen 334s out of which 3 by Sri Bangarappa, 3 by Sri Yediyurappa. One member can send on notice for one week. If a member has sent three notices for the day, what I should do is the question.

SRI M. VEERAPPA MOILY.—You can take up on subsequent days.

MR. SPEAKER.—334 lapses for the day. ನೀವು ಹೇಳುತ್ತಾ ಇದ್ದೀರಿ. ಅಂಥಾದ್ದು ಶೂನ್ಯವೇಳೆ ತೆಗೆದುಬಿಟ್ಟರೆ ತೊಂದರೆಯಾಗುತ್ತದೆ ಎಂದು ಆ ಕಾರಣಕ್ಕಾಗಿ...

ಶ್ರೀ ಎಸ್. ಬಂಗಾರಪ್ಪ.—ಅದನ್ನು ತೆಗೆದುಬಿಟ್ಟರೆ ಆಸೆಂಬ್ಲಿ ಜೀವ ಹೋಗುತ್ತದೆ.

ಅಧ್ಯಕ್ಷರು.—ಈಗ ನನ್ನ ಜೀವ ಹೋಗುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ನಾವು ಹೋಗುವುದಕ್ಕೆ ಬಿಡುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಶೂನ್ಯವೇಳೆ ತೆಗೆಯಬೇಕು ಎಂದು ಹೇಳುತ್ತಾ ಇಲ್ಲ. ಈ ಹೊಸ ನಿಯಮಗಳು ಬಂದಮೇಲೆ ಶೂನ್ಯವೇಳೆ ಬಿಟ್ಟು 330 ಕ್ಕೆ ಏನಾದರೂ ಮಹತ್ವದ ವಿಷಯ, ವಿಚಾರ ಇದ್ದರೆ ಅವಕಾಶ ಇರಬೇಕು ಎಂದು ಮಾಡಿದೆ. ಒಂದೇ ಸಲ 25–30 ಎತ್ತಲಿಕ್ಕೆ ಹೋದರೆ ಸದನದಲ್ಲಿ ಗೊಂದಲವಾನ್ವಿತ ಹಿಂದಿನ ಸಭಾಪತಿಗಳಿದ್ದಾರೆ.

ಅಧ್ಯಕ್ಷರೇ, ಇಲ್ಲಿ ಹಿಂದಿನ ಸಭಾಧ್ಯಕ್ಷರಾಗಿರತಕ್ಕ ಶ್ರೀ ಕೆ. ಹೆಚ್. ರಂಗನಾಥ್‌ರವರು ಮತ್ತು ಶ್ರೀಮತಿ ನಾಗರತ್ನಮ್ಮನವರು ಕುಳಿತಿದ್ದಾರೆ. ಅವರುಗಳು ಇಂತಹ ಪ್ರಶ್ನೆ ಬಂದಾಗ ಮಹತ್ವದ ಒಂದೆರಡು ವಿಚಾರಗಳನ್ನು ಮಾತ್ರ ಎತ್ತುವುವಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದರು. ಇದು ಅವರಿಗೂ ಗೊತ್ತಿದೆ. 15–20 ನೋಟೀಸ್ ಬಂದಾಗ ತಾವು ತಮ್ಮ ಅಧಿಕಾರವನ್ನು ಉಪಯೋಗಿಸಿ ಯಾವುದು ಮಹತ್ವದ್ದು ಉಂಟೋ ಅದನ್ನು ಮಾತ್ರ ಎತ್ತುವುವಕ್ಕೆ ಅವಕಾಶ ಮಾಡಿಕೊಟ್ಟು ಅದು 1 ಗಂಟೆಗಿಂತ ಹೆಚ್ಚಿಗೆ ಹೋಗಬಾರದು ಆ ರೀತಿಯಾಗಿ ನಡೆದುಕೊಂಡು ಬಂದಿರತಕ್ಕ ಸಂಪ್ರದಾಯ. ಮತ್ತೆ ಬಿ.ಎ.ಸಿ.ಯಲ್ಲಿ ಕೂಡ ಇದು ತೀರ್ಮಾನವಾಗಿದೆ.

MR. SPEAKER.—We have already spent one hour after the Question Hour. Let us go to the Legislative Business now and let us sort out this afterwards.

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿನ್ನೆ ಕೂಡ ಪೂರ್ತಿ ಸಹಕಾರವನ್ನು ನಾವು ಕೊಟ್ಟಿದ್ದೇವೆ. ಇವತ್ತೂ ಸಹ ನಾವು 334ರ ಕೆಳಗೆ ರೈಜ್ ಮಾಡದೇ ಹೋದರೆ ಬಹಳಷ್ಟು ವಿಷಯಗಳು ಅರಿಯರ್ಸ್ ಆಗಿ ಉಳಿದುಬಿಡುತ್ತದೆ.

MR. SPEAKER.—I will call the leaders of all Parties. We can sit and discuss this matter. Now I do not want to go back on the decision taken by the Business Advisory Committee.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಇಲ್ಲಿಯವರೆಗೆ ಆನೆ ದಂತದ ಬಗೆ ಚರ್ಚೆಯಾಯಿತು, ಆದರೆ ಬಹಳ ಪ್ರಾಮುಖ್ಯವಾದ ವಿಷಯವನ್ನು ಹೇಳುವುವಕ್ಕೆ ತಾವು ಅವಕಾಶವನ್ನು ಮಾಡಿಕೊಡದಿದ್ದರೆ ನಾವು ಜನಗಳ ಪ್ರಾಮುಖ್ಯವಾದ ಸಮಸ್ಯೆಯನ್ನು ಪ್ರಸ್ತಾಪ ಮಾಡಿ ಹೇಳುವುದು ಹೇಗೆ?

ಅಧ್ಯಕ್ಷರು.—ನಾನು ಮಾಡುತ್ತಿಲ್ಲ. ಬಿ.ಎ.ಸಿ.ಯಲ್ಲಿ ತೀರ್ಮಾನವಾಗಿದೆ. They have decided it. One hour should confine for Rule 334. We have already spent one hour.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ನಾವು ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡದೇ ಹೋದರೆ ಪೆಂಡೆನ್ಸಿ ಜಾಸ್ತಿಯಾಗುತ್ತದೆ.

MR. SPEAKER.—I will take some of them tomorrow. Let us now go to the business. Now for example, Sri M. M. Nanaiah and Sri Morey have given a notice regarding assault in Kolar Police Station. In their notice they have not indicated the details, time and the reasons. So I have disallowed it. That is one. Then, Hon. Member Sri C. V. Puddakalkatti has given a notice about the harassment of the AEOs, Dharwad. The Hon. Member should have taken the opportunity to discuss this matter when the House discussed the Demands for Grants pertaining to Education Department.

ಶ್ರೀ ಕೆ. ಪೆಚ್. ರಂಗನಾಥ್.—ಮಾನ್ಯ ಮಂತ್ರಿಗಳವರು ಅದಕ್ಕೆ ಉತ್ತರ ಕೊಟ್ಟಮೇಲೆ ಅದ್ರು ಪತ್ರಿಕೆಗಳಲ್ಲಿ ಬಂದಿರುವುದರಿಂದ ಅವರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಮುಖ್ಯವಾದುದು. ಆದುದರಿಂದ ಅವರು ನೋಟೀಸ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಸೀಮೆಎಣ್ಣೆ ಅಭಾವದ ಬಗ್ಗೆ ಶ್ರೀ ರಾಮ್‌ದೇವ್‌ರವರು ನೋಟೀಸ್ ಕಳುಹಿಸಿದ್ದಾರೆ.

ಶ್ರೀ ಬಿ. ಬೈರಪ್ಪಾಜಿ.—ಸೀಮೆಎಣ್ಣೆಯ ಬಗ್ಗೆ ಬಹಳ ತೊಂದರೆಯಾಗಿ ಹೋಗಿದೆ. ಹೆಣ್ಣುಮಗಳ ಮಾನಭಂಗ ಆಗಿಹೋಗಿದೆ. ಅದರ ಬಗ್ಗೆ ನಾನೂ ನೋಟೀಸ್ ಕಳುಹಿಸಿದ್ದೇನೆ.

MR. SPEAKER.—I have admitted your Call Attention Notice. Hon. Member has to wait for the ballot.

ಶ್ರೀ ಪಿ. ರಾಮ್‌ದೇವ್.—ಪಬ್ಲಿಗಳು ಬರುತ್ತಿವೆ. ಇದ್ದಕ್ಕಿದ್ದ ಹಾಗೆ ಒಂದು ವಾರದಿಂದ ಸೀಮೆಎಣ್ಣೆಯೇ ಸಿಗುತ್ತಿಲ್ಲ. ಇದರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ?

ಅಧ್ಯಕ್ಷರು.—ಶ್ರೀ ವೀರಪ್ಪ ಮೊಯ್ಲಿಯವರು ಬಿಜಾಪುರದ ಘಟನೆ ಬಗ್ಗೆ ನೋಟೀಸ್ ಕಳುಹಿಸಿದ್ದಾರೆ. You have not indicated how Government is responsible.

ಶ್ರೀ ಬಿ. ಎಸ್. ಯಡಿಯೂರಪ್ಪ.—ಬಾನಸವಾಡಿಯಲ್ಲಿ 200 ಜನರನ್ನು ಬಿ.ಡಿ.ಎ.ದವರು ಹೊರಗಡೆ ಹಾಕುತ್ತಾರೆಂದು ಸುದ್ದಿ ತಿಳಿದುಬಂದಿದೆ., ಅವರು ಸತ್ಯಾಗ್ರಹ ಮಾಡುತ್ತಿದ್ದಾರೆ.

ಅಧ್ಯಕ್ಷರು.—ನೀವು 2-3 ನೋಟೀಸ್ ಕೊಟ್ಟಿದ್ದೀರಿ. Please confine yourself to one notice for one week. There are three notices in your name.

ಶ್ರೀ ಬಿ. ಎಸ್. ಯಡಿಯೂರಪ್ಪ.—ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ. 1500 ಜನಕ್ಕೆ ಆಲ್ಲಿ ತೊಂದರೆಯಾಗುತ್ತದೆ.

MR. SPEAKER.—I only seek the co-operation of the Hon. Members. We have already spent one and a half hours. Let us go to the next business. I will try to take some of the notices in the evening and some of them tomorrow.

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಅಗ್ರಿಕಲ್ಚರಲ್‌ನ ಅಸಿಸ್ಟೆಂಟ್ ಡೈರೆಕ್ಟರ್‌ರವರ ಮರ್ಡರ್ ಆಗಿದೆ. ಇದರ ಬಗ್ಗೆ ನೋಟೀಸ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ಒಂದು ಮರ್ಡರ್ ವಿಚಾರ, ಇನ್ನೊಂದು ರೇಪ್ ವಿಚಾರ. ಪ್ರತಿಯೊಂದು ಪ್ರಶ್ನೆಗಳೂ ಮುಖ್ಯವಾದವುಗಳೇ. ಈಗ ಮುಂದಿನ ಚರ್ಚೆಗೆ ಹೋಗೋಣ.

ವಿತ್ತೀಯ ಕಾರ್ಯಕ್ರಮ

ಶ್ರೀ ಎಸ್. ಕೆ. ಕಾಂತ (ಗುಲ್ಬರ್ಗ).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಭೆಯ ಮುಂದಿಟ್ಟಿರತಕ್ಕ ಬೇಡಿಕೆಗಳನ್ನು ಸಮರ್ಥಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ನಮ್ಮ ಭಾರತ ದೇಶದಲ್ಲಿ, ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯಾನಂತರವೂ ಬಂಡವಾಳಶಾಹಿ ವ್ಯವಸ್ಥೆ ಜಾರಿಯಲ್ಲಿದೆ. ಅವರು ಇಡೀ ರಾಷ್ಟ್ರದ ಸಂಪತ್ತು ಮತ್ತು ಕಾರ್ಮಿಕರನ್ನು ಕಡಿಮೆ ಕಿಮ್ಮತ್ತಿನಲ್ಲಿ ಬಳಸುತ್ತಾ ಬಂದಿದ್ದಾರೆ. ಇವತ್ತಿಗೂ ಕೂಡ ಕಾರ್ಮಿಕರ ಮೇಲೆ ಅನ್ಯಾಯ ನಡೆಯುತ್ತಿದೆ. ಕಾರ್ಮಿಕರಿಗೆ ಸಹಾಯ ದೊರೆಯತಕ್ಕ ವ್ಯವಸ್ಥೆ ಕೇಂದ್ರ ಸರ್ಕಾರದಲ್ಲೂ ಇಲ್ಲ, ರಾಜ್ಯ ಸರ್ಕಾರದಲ್ಲೂ ಇಲ್ಲ. ಆದ್ದರಿಂದ, ರಾಜ್ಯ ಸರ್ಕಾರದವರು ಇದರ ಬಗ್ಗೆ ಕೂಲಂಕುಷವಾಗಿ ವಿಚಾರ ಮಾಡಿ ಸುವ್ಯವಸ್ಥಿತವಾದ ಮತ್ತು ಒಳ್ಳೆಯ ಫಲಕಾರಿಯಾದ ಕಾನೂನನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಅದಕ್ಕಿಂತ ಮೊದಲು, ಗುಲ್ಬರ್ಗ ನಗರದಲ್ಲಿ ಒಂದೇ ಒಂದು ಬಟ್ಟೆ ಗಿರಣಿ ಇದೆ. ಅಲ್ಲಿ ಸುಮಾರು 3 ಸಾವಿರಕ್ಕಿಂತ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಅದು ಕೇಂದ್ರ